ಪನ್ಯಾಸ
ಂಥಮಾಲೆ

೨೩೩

ಜನಪದದಲ್ಲಿ ಮಕ್ಕಳ ಸಾಹಿತ್ಯ

ಡಾ॥ ಸಂಗಮೇಶ ಎಂ. ಬಿರಾದಾರ,
ಎಂ.ಎ., ಪಿಎಚ್.ಡಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜೂನ್, ೧೯೭೬

ಉಪನ್ಯಾಸ ಗ್ರಂಥಮಾಲೆ

೨೩೩

ಜನಪದದಲ್ಲಿ ಮಕ್ಕಳ ಸಾಹಿತ್ಯ

ಡಾ|| ಸಂಗಮೇಶ ಎಂ. ಬಿರಾದಾರ,
ಎಂ.ಎ., ಪಿಎಚ್.ಡಿ.

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ,
ಜೂನ್ ೧೯೭೬

ಪ್ರಕಾಶಕರು :
ಸಿ. ಎಸ್. ಕಣವಿ,
ನಿರ್ದೇಶಕರು, ವ್ಯಾಸಂಗವಿಸ್ತರಣ
ಮತ್ತು ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಜೂನ್, ೧೯೭೬

ಬೆಲೆ: ೨೫ ಪೈಸೆಗಳು

ಮುದ್ರಕರು :
ಎಸ್. ಎಮ್. ಜಕರಡ್ಡಿ, ಬಿ. ಎ.
ಸಂಗಮ ಮುದ್ರಣಾಲಯ
ಸಾಧನಕೇರಿ, ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗು ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು. ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ. ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗು ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗು ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ೨೩೨ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೨೫-೬-೧೯೭೬

ಆರ್. ಸಿ. ಹಿರೇಮಠ,
ಕುಲಪತಿಗಳು

ನಿವೇದನೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗವಿಸ್ತರಣ ಮಾಲೆಯ ೨೩೩ನೆಯ ಉಪನ್ಯಾಸಮಾಲೆಯು ವಿಜಾಪುರ ಜಿಲ್ಲೆಯ ಸಾರವಾಡದಲ್ಲಿ ೧೯೭೫ ರ ಜುಲೈ ತಿಂಗಳಲ್ಲಿ ನಡೆಯಿತು. ಆ ಮಾಲಿಕೆಯಲ್ಲಿ ನನ್ನನ್ನು ಸೇರಿಸಿ, "ಜನಪದದಲ್ಲಿ ಮಕ್ಕಳ ಸಾಹಿತ್ಯ" ಎಂಬ ವಿಷಯವನ್ನು ಕುರಿತು ಮಾತನಾಡುವದಕ್ಕೆ ಅನುವು ಮಾಡಿಕೊಟ್ಟರು. ಆ ಭಾಷಣದ ವ್ಯವಸ್ಥಿತವಾದ ರೂಪವೇ ಈ ಪುಸ್ತಿಕೆ.

ಇದರಲ್ಲಿ ನಾನು ಮಕ್ಕಳಿಗೆ ಸಂಬಂಧಿಸಿದಂತಹ ಸಾಹಿತ್ಯವನ್ನು ವಿಜಾಪುರದ ಸುತ್ತು-ಮುತ್ತಿನ ಪ್ರದೇಶದಿಂದ ಆಯ್ದುಕೊಂಡಿದ್ದೇನೆ. ಆದ್ದರಿಂದ ಇದಕ್ಕೆ ಸೀಮೆ ಇದೆ. ಓದುಗರು ಇದನ್ನು ಗಮನದಲ್ಲಿರಿಸಿಕೊಳ್ಳಬೇಕು. ಮತ್ತು ಇಲ್ಲಿ ನಾನು ದೊರೆಯುವ ಎಲ್ಲ ಸಾಮಗ್ರಿಯನ್ನು ಸ್ಥಳಾಭಾವದ ಮೂಲಕ ಬಳಸಿಕೊಂಡಿಲ್ಲ. ದಿಗ್ದರ್ಶನಾರ್ಥವಾಗಿ ಕೆಲವನ್ನು ಮಾತ್ರ ತೋರಿಸಿದ್ದೇನೆ. ಮಕ್ಕಳ ಸಾಹಿತ್ಯವನ್ನೇ ಕುರಿತು ಸಂಗ್ರಹಗಳು ಬರಬೇಕಾಗಿವೆ. ಅಂಥವರಿಗೆ ನಾನು ನನ್ನ ಈ ಪುಸ್ತಿಕೆಯಲ್ಲಿ ಅಲ್ಲಲ್ಲಿ ಸೂಚನೆಗಳನ್ನು ಕೊಟ್ಟಿದ್ದೇನೆ.

ಮಕ್ಕಳ ಸಾಹಿತ್ಯವನ್ನು ಕುರಿತು ಕೆಲವು ಮಾತುಗಳು ಬೇರೆ ಬೇರೆ ಗ್ರಂಥಗಳಲ್ಲಿ ಬಂದಿವೆ. ಹಾಗಿದ್ದುದರಿಂದ ಅದೇ ಇಲ್ಲಿ ಬಂದಿದೆ ಎಂದು ಅನಿಸುವುದು ಸ್ವಾಭಾವಿಕ. ಆದರೆ ಅದು ಅನಿವಾರ್ಯವೆಂದಲ್ಲ. ಕೆಲವು ಬದಲಾವಣೆಗಳಿದ್ದುದರಿಂದ,

ನಿರೂಪಣೆಯಲ್ಲಿ ವ್ಯತ್ಯಾಸವೆನಿಸಿದ್ದರಿಂದ, ಉಪಯೋಗಿಸಿದ್ದೇನೆ. ಸಾಧ್ಯವಿದ್ದಮಟ್ಟಿಗೆ ಅನುಕರಣೆಗೆ ಆಸ್ಪದಕೊಟ್ಟಿಲ್ಲ.

ಈ ಕಾರ್ಯಕ್ಕೆ ಪ್ರೋತ್ಸಾಹಿಸಿ ಅವಕಾಶ ಒದಗಿಸಿಕೊಟ್ಟ ವ್ಯಾಸಂಗವಿಸ್ತರಣ ಶಾಖೆಯ ನಿರ್ದೇಶಕರಿಗೂ, ವಿಶ್ವವಿದ್ಯಾಲಯದ ಇತರ ಅಧಿಕಾರವರ್ಗಕ್ಕೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಹೋದ್ಯೋಗಿಗಳೂ ವಿದ್ಯಾರ್ಥಿ ಮಿತ್ರರೂ ಸಾಧನ ಸಾಮಗ್ರಿಯನ್ನು ದೊರಕಿಸಿಕೊಡುವಲ್ಲಿ ನೆರವಾಗಿದ್ದು ಅವರಿಗೆ ನನ್ನ ಕೃತಜ್ಞತೆಗಳು. ಸಹೃದಯತೆಯಿಂದ ಕೇಳಿ, ಮೆಚ್ಚಿಕೊಂಡು ಪ್ರೋತ್ಸಾಹವಿತ್ತ ಸಾರವಾಡದ ಜನತೆಗೆ ನಾನು ಋಣಿಯಾಗಿದ್ದೇನೆ.

ಸಂಗಮೇಶ ಎಂ. ಬಿರಾದಾರ.

ಕಲೆ ಮತ್ತು ವಿಜ್ಞಾನ
ಮಹಾವಿದ್ಯಾಲಯ,
ಜಮಖಂಡಿ
೨೮-೧೧-೧೯೭೫

ಪರಿವಿಡಿ

ಮೊದಲ ಮಾತು

'ಮನುಜನಿಗೆ ಮಗು ತಂದೆ' ಎಂಬುದು ಎಷ್ಟು ಸತ್ಯ ವಾದುದೋ ಅಷ್ಟೇ ಸತ್ಯವಾದುದು ಸಾಹಿತ್ಯಕ್ಕೆ ಮೂಲ ಜನಪದ ಎಂಬುದು. ಅಭ್ಯಾಸ ಮಾಡಿದಾಗಲೇ ಪಾಂಡಿತ್ಯ ಸಂಪಾದಿಸಿದಾ ಗಲೇ ಕಾವ್ಯ ಹೊರಹೊಮ್ಮುತ್ತಿದೆಯೆನ್ನುವುದು ಸಂಪೂರ್ಣ ಸತ್ಯ ವಾದುದಲ್ಲ, ಅದು ಅಂತಃಪ್ರೇರಣೆ: ಒಂದು ಶಕ್ತಿ. ಅಂತೆಯೇ,

ಶಕ್ತಿರ್ನಿಪುಣತಾ ಲೋಕಶಾಸ್ತ್ರಕಾವ್ಯಾದ್ಯವೇಕ್ಷಣಾತ್ .
ಕಾವ್ಯಜ್ಞಶಿಕ್ಷಯಾಭ್ಯಾಸ ಇತಿ ಹೇತುಸ್ತದುದ್ಭವೇ ।

ಎಂದು ಮಮ್ಮಟನು ಕಾವ್ಯನಿರ್ಮಿತಿಗೆ ಶಕ್ತಿ, ನೈಪುಣ್ಯ ಮತ್ತು ಅಭ್ಯಾಸ ಇವು ಮೂರೂ ಕಾರಣವೆಂದು ಹೇಳಿದ್ದರೂ ಶಕ್ತಿಗೆ ಪ್ರಥಮ ಸ್ಥಾನವನ್ನು ಕೊಟ್ಟಿದ್ದಾನೆ. 'ಪ್ರತಿಭೆ' ಎಂಬುದು ಬೀಜ, ಉಳಿದವುಗಳು ಮಣ್ಣು, ನೀರು, ಹವೆ, ಗೊಬ್ಬರಗಳಿ ದ್ದಂತೆ. ಆದ್ದರಿಂದ ಕಾವ್ಯನಿರ್ಮಿತಿಗೆ ಪಾಂಡಿತ್ಯಕ್ಕಿಂತಲೂ ಪ್ರತಿಭೆ ಮುಖ್ಯವೆಂಬುದು ನಿರ್ವಿವಾದ. ಈ ಗುಣವುಳ್ಳುದು ನಮ್ಮ ಜಾನಪದ. ಅವರ ಪ್ರತಿಭೆಯು ಮೂಸೆಯಲ್ಲಿ ಮೂಡಿ ಬಂದುದು ಜನಪದಸಾಹಿತ್ಯ. ಇವನ್ನೇ ಕವಿರಾಜಮಾರ್ಗಕಾರ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂದು ಜನಪದವನ್ನು ಕುರಿತು ಹೇಳಿದ್ದಾನೆ. ಆ ಜನಪದದ ನುಡಿಗಡಣವೇ ಜನಪದಸಾಹಿತ್ಯ.

ಪ್ರೌಢಸಾಹಿತ್ಯದ ಮೂಲವನ್ನು ಕಂಡುಹಿಡಿಯಬಹುದಾ ದರೂ ಜನಪದಸಾಹಿತ್ಯದ ಉಗಮವನ್ನು ಗುರುತಿಸುವದು ಸಾಧ್ಯವಲ್ಲ. ಮನುಷ್ಯನಿಗೆ ಎಂದು ಭಾವನೆಗಳು ಉತ್ಪನ್ನ

ವಾದುವೋ ಅಂದು ತನ್ನ ಅನಿಸಿಕೆಗಳನ್ನು ಹಾಡನ್ನಾಗಿ ಹಾಡತೊಡಗಿದ, ಕಥೆಯಾಗಿ ಹೇಳತೊಡಗಿದ. ಅವು ಬಾಯಿಯಿಂದ ಬಾಯಿಗೆ, ಜನಾಂಗದಿಂದ ಜನಾಂಗಕ್ಕೆ ನಡೆದುಕೊಂಡು ಬಂದುವು. ಪಂಡಿತರಿಂದ ಪ್ರೌಢಸಾಹಿತ್ಯ ನಿರ್ಮಾಣವಾದಾಗಲೂ ಈ ಝರಿ ಬತ್ತಲಿಲ್ಲ, ಪ್ರವಹಿಸುತ್ತಲೇ ನಡೆಯಿತು. ಮಹಾಕವಿಗಳ ಕಾವ್ಯಗಳಲ್ಲಿಯೂ ಅಲ್ಲಲ್ಲಿ ಕಾಣಿಸಿಕೊಂಡು 'ಕರ್ಮಣಿಯ ಸರದೊಳ್ ಚೆಂಬವಳಮಂ ಕೋದಂತೆ' ತನ್ನತನದ ಹಿರಿಮೆಯನ್ನು ಮೆರೆಯಿಸುತ್ತ ಬಂದಿರುವುದನ್ನು ಸಾಹಿತ್ಯ ಚರಿತ್ರೆಯಲ್ಲಿ ಕಂಡುಕೊಳ್ಳುತ್ತೇವೆ. ಆದರೂ

ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ ।
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೇ ಬೀದಿವರೆಯೆ ಬೀರನ ಕತೆಯೆ ॥

ಎಂದು ಆಗಾಗ ಪಂಡಿತರಿಂದ ತಿರಸ್ಕರಿಸಲ್ಪಟ್ಟುದರಿಂದ ಜನಪದ ಸಾಹಿತ್ಯವು ಎಲೆಯ ಜುಡುಪನ್ನು ಮರೆಗೊಂಡು ಕೂಗುವ ಕೋಗಿಲೆಯಂತೆ ಜನಸಾಮಾನ್ಯರನ್ನು ಆಶ್ರಯಿಸಿ ತನ್ನ ಧ್ವನಿಯನ್ನು ಬೀರತೊಡಗಿತು; ಇಂದೂ ಬೀರುತ್ತಲಿದೆ.

ಜನಪದಸಾಹಿತ್ಯ ಒಂದು ಬಹುಕೋನಾಕೃತಿಯುಳ್ಳ ವಜ್ರಗೋಲಕ. ಒಂದೊಂದು ಮುಖವೂ ತನ್ನದೇ ಆದ ಒಂದು ಸೌಂದರ್ಯದಿಂದ ಕೂಡಿಕೊಂಡಿದೆ. ೧೯೨೩ ರಲ್ಲಿ ವಿಜಾಪೂರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿ. ಘಾಜ್ಯ ಚನ್ನ-

ಮಲ್ಲಪ್ಪ ಹಲಸಂಗಿಯವರು ಪ್ರಥಮ ಬಾರಿಗೆ ಜಾನಪದಸಾಹಿತ್ಯದ ವಿಷಯವಾಗಿ ಪ್ರತಿಪಾದಿಸಿದಂದಿನಿಂದ ಇಂದಿನವರೆಗೆ ನೂರಾರು ಜನಪದಸಾಹಿತ್ಯ ಸಂಗ್ರಹಗಳು ಹೊರಬಂದಿವೆ. ಇವು ಒಂದರಂತೆ ಇನ್ನೊಂದಾಗಿಲ್ಲ. ಪ್ರತಿಯೊಂದರಲ್ಲಿಯೂ ತನ್ನದೇ ಆದ ವೈಶಿಷ್ಟ್ಯವಿದೆ. ಇಷ್ಟು ಸಂಕಲನಗಳು ಹೊರಬಂದಿದ್ದರೂ ಈ ಸಾಹಿತ್ಯಸಂಗ್ರಹದ ಕಾರ್ಯ ತೀರ ಸ್ವಲ್ಪವೆಂದೇ ಹೇಳಬೇಕು. ಮಾಡಬೇಕಾದ ಕೆಲಸ ಬಹಳವಿದೆ. ಇದೊಂದು ಒರತೆಯಿದ್ದಂತೆ. ಹೊರಚೆಲ್ಲಿದಷ್ಟೂ ಮತ್ತೆ ತುಂಬಿಕೊಳ್ಳುತ್ತದೆ. ಹೊರಬಂದದ್ದರಲ್ಲಿ ಬಹುಪಾಲು ಶಕ್ತಿಯುತವಾಗಿದೆ. ಇದು ಅದರ ಹಿರಿಮೆಯನ್ನು ಎತ್ತಿತೋರಿಸುತ್ತದೆ.

ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ

ಎನ್ನುವಂತೆ ಈ ಜನಪದ ಸಾಹಿತ್ಯವೂ ಎಲ್ಲರನ್ನು ತುಷ್ಟಿಗೊಳಿಸುತ್ತದೆ. ಮಕ್ಕಳು. ತರುಣರು. ಮುಪ್ಪಿನವರು ಎಂದು ವಯೋಮಾನಕ್ಕನುಗುಣವಾಗಿಯೂ ಹೆಂಗಸರು, ಗಂಡಸರು ಎಂದು ಲಿಂಗಭೇದಕ್ಕನುಗುಣವಾಗಿಯೂ ಅವರವರಿಗೆ ತಕ್ಕಂತಹ ಸಾಹಿತ್ಯ ಇದರಲ್ಲಿದೆ.

ಜನಪದಸಾಹಿತ್ಯವನ್ನುಳಿದು ಕನ್ನಡಸಾಹಿತ್ಯದ ಚರಿತ್ರೆಯನ್ನು ಅವಲೋಕಿಸಿದರೆ ಜೆ. ವಾಸುದೇವಯ್ಯನವರ ಒಂದನೆಯ ಬಾಲಬೋಧೆ, ಶ್ರೀನಿವಾಸರಾವ್ ಅವರ ಎರಡನೆಯ ಬಾಲಬೋಧೆ, ಎಂ. ಎಸ್. ಪುಟ್ಟಣ್ಣನವರು ಮತ್ತು ಎಸ್. ಜಿ. ನರಸಿಂಹಾಚಾರ್ಯರ ಹೊಣೆಗಾರಿಕೆಯಲ್ಲಿ ಮೂಡಿಬಂದ ಒಂದ

ನೆಯ ಪುಸ್ತಕ, ಎರಡನೆಯ ಪುಸ್ತಕಗಳು ಮೈಸೂರಿನ ಕಡೆಗೆ; ಡೆಪ್ಯುಟಿ ಚನ್ನಬಸಪ್ಪನವರು, ವೆಂಕಟರಂಗೊ ಕಟ್ಟಿಯವರು ಶಾಂತಕವಿಗಳು ಮಕ್ಕಳಿಗೆ ಮೆಚ್ಚುಗೆಯಾಗುವ ಗದ್ಯ-ಪದ್ಯಗಳನ್ನು ಕ್ರಮಿಕ ಪುಸ್ತಕಗಳಲ್ಲಿ ಸೇರಿಸಿ ಸಿದ್ಧಗೊಳಿಸಿದ ಪಠ್ಯಪುಸ್ತಕಗಳು ಧಾರವಾಡದ ಕಡೆಗೆ; ಮ್ಯಾಕಮಿಲನ್ ಅವರ ರೀಡರುಗಳು ಮದ್ರಾಸಿನ ಕಡೆಗೆ ಮೂಡಿಬಂದಿರುವುದನ್ನು ಕಾಣುತ್ತೇವೆ. ೧೯೨೮ನೆಯ ಇಸ್ವಿಯಲ್ಲಿ ಕಲಬುರ್ಗಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ 'ಶ್ರೀ'ಯವರು ಮಕ್ಕಳ ಸಾಹಿತ್ಯವನ್ನು ನಮ್ಮ ಹೊಸಲೇಖಕರು ಬರೆಯುವರೆಂಬ ಆಶೆಯನ್ನು ವ್ಯಕ್ತಪಡಿಸಿದ್ದರು. ಆ ಹೊಂಗನಸು ಇನ್ನೂ ಕನಸಾಗಿಯೇ ಉಳಿದಿದೆಯಲ್ಲದೆ ನನಸಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಅಂತೂ ಇದೆಲ್ಲ ನಡೆದುದು ಇಪ್ಪತ್ತನೆಯ ಕಾಲುಶತಮಾನದ ಈಚೆಯಿಂದಲೇ ಎಂಬುದು ವಿಚಾರಣೀಯವಾದುದು. ಆದರೆ ಈ ಹಿಂದೆಯೇ ಜನಪದ ಸಾಹಿತ್ಯ ತನ್ನ ವಿವಿಧ ಮುಖಗಳಲ್ಲಿ ಮಕ್ಕಳ ಸಾಹಿತ್ಯವನ್ನು ರೂಪಿಸಿತ್ತೆನ್ನುವದನ್ನು ನೆನೆಸಿಕೊಂಡರೆ ಯಾರಿಗೆ ತಾನೆ ಆಶ್ಚರ್ಯವಾಗಲಿಕ್ಕಿಲ್ಲ! ಅವರ ಹಿರಿಮೆಯ ಅರಿವಾಗಲಿಕ್ಕಿಲ್ಲ!

ಈ ಹಿಂದೆಯ ಜನಪದದಲ್ಲಿ ಮಕ್ಕಳ ಸಾಹಿತ್ಯ ಮೈದಾಳಿದ್ದರೂ ಅದನ್ನೇ ಒಳಗೊಂಡಂತಹ ಸಂಗ್ರಹ ಈ ವರೆಗೆ ಬಂದುದು ನನ್ನ ಗಮನಕ್ಕೆ ಬಂದಿಲ್ಲ. ಬೇರೆ ಬೇರೆ ಸಂಗ್ರಹಗಳಲ್ಲಿ ಜನಪದಸಾಹಿತ್ಯ ಕುರಿತಾದ ಪ್ರಬಂಧಗಳಲ್ಲಿ ಈ ಮಕ್ಕಳ ಸಾಹಿ

ಕ್ಕೆ ಅಲ್ಪಸ್ವಲ್ಪ ಅವಕಾಶ ದೊರೆತಿದೆ. ಜನಪದಸಾಹಿತ್ಯೋತ್ಸ
ರು ಈ ಕಡೆಗೆ ಗಮನ ಹರಿಸಿ, ಸಂಗ್ರಹಮಾಡಿದಲ್ಲಿ ಇಂತಹ
ಂದು ಕೊರತೆಯನ್ನು ತುಂಬಿಕೊಟ್ಟ ಶ್ರೇಯಸ್ಸು ಅವರದಾಗು
ದೆ.

ಮಕ್ಕಳು ಎಂದಾಗ ಇಲ್ಲಿ ಗಂಡು-ಹೆಣ್ಣು ಎರಡೂ ಸೇರ್ಪಡೆ
ಯಾಗುತ್ತವೆ. ಕೆಲವು ಪದಗಳು ಇಬ್ಬರನ್ನು ಕುರಿತಾಗಿದ್ದರೆ
ನ್ನು ಕೆಲವು ಗಂಡಿಗೇ ಇಲ್ಲವೆ ಹೆಣ್ಣಿಗೆ ಸಂಬಂಧಿಸಿದವು ಆಗಿ
ವೆ. ಮಕ್ಕಳೇ ಹಾಡಿ-ನಲಿದಾಡುವ ಪದಗಳನ್ನು ಒಂದೆಡೆಗೆ
ಡಿದರೆ, ಮಕ್ಕಳಿಗಾಗಿ ಇತರರು ಹೇಳಿದವುಗಳನ್ನು ಇನ್ನೊಂ
ಡೆಗೆ ನೋಡುತ್ತೇವೆ. ಆದ್ದರಿಂದ ವಿಷಯ ವಿವೇಚನೆಯ
ಷ್ಟಿಯಿಂದ ಅವನ್ನು ಹೀಗೆ ವಿಭಾಗಿಸಬಹುದು:

೧) ಆಟಗಳಲ್ಲಿ – ಅ) ಗಂಡು–ಹೆಣ್ಣು
ಆ) ಗಂಡು
ಇ) ಹೆಣ್ಣು

೨) ಹಬ್ಬಗಳಲ್ಲಿ – ಅ) ಗಂಡು
ಆ) ಹೆಣ್ಣು

೩) ಮಕ್ಕಳನ್ನು ಆಡಿಸುವಾಗಿನ ಪದಗಳಲ್ಲಿ –
ಅ) ಗಂಡು–ಹೆಣ್ಣು

ಇಲ್ಲಿ ಮಾಡಿಕೊಂಡ ವಿಭಾಗಕ್ರಮವಾಗಲಿ, ಬಳಸಿಕೊಂಡ
ಹಿತ್ಯವಾಗಲಿ ಪರಿಪೂರ್ಣವಾದುದೆಂದು ಭಾವಿಸುವಂತಿಲ್ಲ.
ತ್ತರ ಕರ್ನಾಟಕದಲ್ಲಿ, ಅದರಲ್ಲಿಯೂ ವಿಜಾಪೂರದ ಸುತ್ತ-

ಮುತ್ತಲಿನ ಪ್ರದೇಶದಲ್ಲಿ, ದೊರೆಯುವ ಸಾಹಿತ್ಯದ ಕೆಲವಂಶವನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ನಿರೂಪಿಸಲಾಗಿದೆ. ಪ್ರತಿ ಹತ್ತು ಹರದಾರಿಗೂ ಸಂಪ್ರದಾಯ, ಆಟಪಾಟ, ರೀತಿ-ರಿವಾಜುಗಳು ಬದಲಾಗುವುದರಿಂದ ಅಲ್ಲಲ್ಲಿಯ ರೀತಿಯೇ ಬೇರೆಯಾಗುವುದರಲ್ಲಿ ಸಂದೇಹವಿಲ್ಲ. ನನಗೆ ದೊರೆತ ಸಮಯ–ಸಾಮಗ್ರಿಗಳ ಮೇಲಿಂದ ದಿಗ್ದರ್ಶನಾರ್ಥವಾಗಿ ಇದಿಷ್ಟನ್ನು ಪಡಿಮೂಡಿಸಿದ್ದೇನೆ. ಇಂತಹ ಹತ್ತಾರು ಪರಿಶ್ರಮಗಳು ಕೂಡಿಕೊಂಡಾಗ ಸಮಗ್ರಚಿತ್ರಣ ಮೂಡಿಬರುವದರಲ್ಲಿ ಸಂದೇಹವಿಲ್ಲ.

ಇನ್ನೊಂದು ನಾನು ಮುಖ್ಯವಾಗಿ ಇಲ್ಲಿ ಮೂಡಿಸಿದ ವಿಷಯವೆಂದರೆ, ಜಾನಪದ ಪದ್ಯಗಳನ್ನು ಕೊಡುವಾಗ ಅವುಗಳನ್ನು ಹೇಗೆ ಉಚ್ಚರಿಸುತ್ತಾರೆಯೋ ಅದೇ ರೀತಿಯಲ್ಲಿ ಬರವಣಿಗೆಗೆ ಇಳಿಸಲು ಪ್ರಯತ್ನಿಸಿದ್ದೇನೆ. ಅದಕ್ಕಾಗಿ ಸ್ವರಗಳಲ್ಲಿ ಅ ಅ಼, ಆ ಆ಼, ಅ್ಯ ಆ್ಯ ಎಂಬೀ ರೀತಿಯಾಗಿ 'ಅ'ಕ್ಕೆ ಒಂದು ದೀರ್ಘವನ್ನು 'ಆ'ಕ್ಕೆ ಒಂದು ಹ್ರಸ್ವಸ್ವರವನ್ನು ಸೇರಿಸುವುದರ ಜೊತೆಗೆ ಅ್ಯ ಆ್ಯ ಎಂಬೆರಡು ಸ್ವರಗಳನ್ನು ಕೂಡಿಸಿದ್ದೇನೆ. ಈಗಿರುವ 'ಅ' ಹ್ರಸ್ವವಾದುದು. ಅದಕ್ಕೆ ದೀರ್ಘ ಸೇರಿಸಿ 'ಅ಼' ಮಾಡಿಕೊಂಡಿದ್ದೇನೆ.

ಕಾಳ್ಯಾ ಮಾಳ್ಯಾ । ಕಾಪಾ಼ಟ ಮಾಳ್ಯಾ ।
ಸುರಿ ಮಾಳಿಯ಼ । ಸುರಿ ಮಾಳಿಯ಼ ।

ಎನ್ನುವಲ್ಲಿ 'ಮಾಳಿಯ' ಎನ್ನುವುದನ್ನು ಅಕಾರದಲ್ಲಿಯೇ ದೀರ್ಘಮಾಡುವುದುಂಟು. ಇಂಥಲ್ಲಿ ಈ ವರೆಗೆ 'S' ಈ ಚಿಹ್ನ

ನ್ನು ಇಡಲಾಗುತ್ತಿತ್ತು. ಅದಕ್ಕೆ ಬದಲಾಗಿ 'ೕ' ದೀರ್ಘವನ್ನು ಟ್ಟುಕೊಂಡಿದ್ದೇನೆ.

ಕಲ್ಲ ಕಾಟ ಕಾಟ। ಮುಳ್ಳ ಮುರಿ ಮುರಿ।

ನ್ನುವಲ್ಲಿ 'ಕಟಿ' ಎಂಬ ಶಬ್ದವು ಜನಪದದಲ್ಲಿ ಇಕಾ ಾಂತವನ್ನು ಪಡೆಯುತ್ತದೆ. ಅದರಿಂದ 'ಕಟ' ಎಂದು ಬರೆದ ಾದರೆ, ಕಟಿ-ಕಠಿಣ, (ಕಟಿಕರೊಟ್ಟಿ-ಕಟಿ ರೊಟ್ಟಿ ಎಂಬಂತೆ) ಂಬ ಅರ್ಥ ದೊರಕುತ್ತದೆ. ಇನ್ನು ಇಲ್ಲಿ ಉಚ್ಚರಿಸುವದು ಕಾರವನ್ನಲ್ಲ. ಹ್ರಸ್ವ ಆಕಾರವನ್ನು. ಈಗಿದ್ದ ಪ್ರಕಾರವೇ ಅಕ್ಷರ ಾಂದನ್ನೇ ಇರಿಸಿಕೊಂಡರೆ 'ಕಾಟ'-ಕಾಡೆ ಎಂಬರ್ಥ ಕೊಡು ದೆ. ಅದಕ್ಕಾಗಿ ಹ್ರಸ್ವ ಆಕಾರದ ಆವಶ್ಯಕತೆ ಅನಿಸಿದ್ದರಿಂದ ಗಿರುವ ಆಕಾರವನ್ನು ಹ್ರಸ್ವವನ್ನಾಗಿರಿಸಿಕೊಂಡು ಅದಕ್ಕೆ ೀರ್ಘವನ್ನು ಸೇರಿಸಿ ದೀರ್ಘ ಆಕಾರವನ್ನು ನಿರ್ಮಿಸಿಕೊಂಡಿ ೇನೆ.

'ಕೆರೆ'. 'ಬೆರೆ'. ಎಂಬವುಗಳು ರೂಢಿಯಲ್ಲಿ ಕ್ಯಾರಿ,ಬ್ಯಾರಿ ಂದಾಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅವುಗಳನ್ನು ಷ್ಟೋ ಕಡೆಗೆ ಕ್ಯಾರಿ,ಬ್ಯಾರಿ ಎಂದೇ ಬರೆದುದೂ ಉಂಟು. ದರೆ ಕೇರೆ (ಹಾವು), ಬೇರೆ (ಇನ್ನೊಂದು) ಎನ್ನುವವುಗಳನ್ನು ರೆಯುವದು ಹೇಗೆ? ಅಲ್ಲಿಯೂ ಕ್ಯಾರಿ,ಬ್ಯಾರಿ ಎಂದು ಬರೆ ದ್ದಾದರೆ ಮೇಲಿನವುಗಳಲ್ಲಿ ಬೆರೆತುಹೋಗಿ ಅಪಾರ್ಥಕ್ಕೆ ಎಡೆ ಯಾಗುತ್ತದೆ. ಆದ್ದರಿಂದ ಅವುಗಳನ್ನು ಕ್ಯಾೕರಿ, ಬ್ಯಾೕರಿ ಎಂದು ೕರ್ಘೀಕರಿಸಿ ಬರೆದದ್ದಾದರೆ ಈ ಗೊಂದಲ ತಪ್ಪಿ ಹೋಗು ತ್ತದೆ. ಜನಪದವನ್ನು ಕೆಡಿಸದೆ ಉಳಿಸಿಕೊಂಡಂತಾಗುತ್ತದೆ.

ಭಾಷಾಶಾಸ್ತ್ರಜ್ಞರು ಈ ದಿಶೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಅದಕ್ಕೆ ಜಾನಪದಸಾಹಿತ್ಯ ಒಂದು ಒಳ್ಳೆಯ ಮಾಧ್ಯಮವಾಗಬಹುದು. ಆ ಒಂದು ಉದ್ದೇಶವನ್ನಿಟ್ಟುಕೊಂಡೇ ಇಲ್ಲಿ ನಾನು ಈ ಪ್ರಯೋಗವನ್ನು ಮಾಡಿದ್ದೇನೆ. ಇದು ಪ್ರಯೋಗಾವಸ್ಥೆಯಿರುವುದರಿಂದ ಸರ್ವಜನಗ್ರಾಹ್ಯವಾಗದೆ ಹೋಗಬಹುದಾದರೂ ಇವನ್ನೇ ಸ್ವೀಕರಿಸುವ ಕಾಲ ಒಮ್ಮೆ ಬರಬಹುದು ಎಂಬ ಆಶಾಭಾವನೆಯಿಂದ ಮುಂದುವರಿದಿದ್ದೇನೆ.

ಆಟಗಳು

ಭಾಷೆ ಆ ಜನಾಂಗದ ಸಂಸ್ಕೃತಿಯನ್ನು ಸೂಚಿಸುತ್ತದೆ. ಈ ನಿಯಮಕ್ಕೆ ಕನ್ನಡವೂ ಹೊರತಾಗಿಲ್ಲ. ಕನ್ನಡಿಗರು ಜೀವನವನ್ನೇ ಒಂದು ಆಟವನ್ನಾಗಿಸಿಕೊಂಡಿದ್ದಾರೆ. ಜಗನ್ನಿಯಾಮಕನೆ ಸೂತ್ರಧಾರ. ಅಂತೆಯೇ ನಾನಾದಿ ಜೀವಿಗಳೆಲ್ಲ ಅವನ ಗೊಂಬೆಗಳು. ಅವನಾಡಿಸಿದಂತೆ ಆಡುವದೊಂದೆ ಜೀವಿಯ ಕೆಲಸ. ಇಲ್ಲಿ ಅವನಿಗೆ ಸ್ವಾತಂತ್ರ್ಯವಿಲ್ಲ. ಆದ್ದರಿಂದ ಸುಖ-ದುಃಖಗಳೆರಡೂ ಸಮಾನವೆ. ಅಂತೆಯೆ ನಡೆದಾಟ, ಕುಂಟಾಟ, ಓಡಾಟ, ತಿರುಗಾಟ, ಮುಟ್ಟಾಟ, ಕಣ್ಣುಮುಚ್ಚಾಟ ಎಂಬವುಗಳು ಆಟಗಳಾಗಿರುವಂತೇ, ಬೇರೆ ಸಾಧನ ಸಾಮುಗ್ರಿಗಳನ್ನು ಬಳಸಿಕೊಂಡು ಆಡುವ ಕೋಲಾಟ, ಗೊಂಬೆಯಾಟ, ಬೊಗರೆಯಾಟಗಳಂತೆ ಪ್ರಪಂಚವನ್ನು ಅನುಕರಣ ಮಾಡುವುದು ಒಂದು ಆಟವೆ (ನಾಟಕ). ಹೊಡೆದಾಟ, ಬಡಿದಾಟ, ತೂರಾಟ, ಏರಾಟ, ಗುದ್ದಾಟ ಇಂತಹ ವೈರತ್ವವು. ಒಡನಾಟದಂತಹ ಸ್ನೇಹವು ಆಟವೇ. ಅದರಂತೆ ಗೋಳಾಟ, ಚೀರಾಟ, ಬೋರಾಟಗಳಂತಹ ದುಃಖಗಳೂ ಆಟಗಳಲ್ಲದೆ ಇನ್ನೇನಲ್ಲ. ಬೈಗುಳವೂ ಒಂದು ಆಟವೆ. ಬಿದ್ದಾಡಿಯಂತೆ*. ಇಷ್ಟೇ ಏಕೆ ಜೀವನೋತ್ಪತ್ತಿಯಾಗುವುದು ಈ 'ಟ್ಯಾಟ' ಎಂಬ ಆಟದಲ್ಲಿಯೆ. ಹೀಗೆ ಕನ್ನಡಿಗರ ಜೀವನವನ್ನೇ ವ್ಯಾಪಿಸಿದೆ ಈ ಆಟ.

ಮಗು ತೊಟ್ಟಿಲಲ್ಲಿ ಪಟ್ಟಿರಿಸಿದಾಗಲೆ ಆಟಕ್ಕೆ ಮೊದಲು ಮಾಡುತ್ತದೆ. ಯಾವ ವಸ್ತುವೂ ಇಲ್ಲದಾಗ ತನ್ನ ಕೈ ಕಾಲಿನೊಂದಿಗೆ ಆಟವಾಡುತ್ತದೆ. ತಾಯಿ ಆ ಆಟವನ್ನು ನೋಡಿ

---

*ಅನೈತಿಕ ಸ್ತ್ರೀ

ಅದರ ಕೈಯಲ್ಲಿ ಗಿಲಗಿಂಚಿಯನ್ನೋ ಗೊಂಬಿಯನ್ನೋ ಕೊಟ್ಟು ಅದು ಆಟದಲ್ಲಿ ಮೈಮರೆಯುವಂತೆ ಮಾಡಿ ಅದನ್ನು ನೋಡಿ ಸಂತೋಷ ಪಡುತ್ತಾಳೆ. ಗುಬ್ಬಿಯ ಛತ್ತನ್ನು ಕಟ್ಟಿ ಅವರ ದೃಷ್ಟಿಯಾಟವನ್ನು ನಿರೀಕ್ಷಿಸಿ ನಲಿಯುತ್ತಾಳೆ.

ಅನುಕರಣವೆಂಬ ಗುಣ ಮಕ್ಕಳಲ್ಲಿರುವ ಒಂದು ದೈವದತ್ತ ದೇಣಿಗೆ. ಅದಿಲ್ಲದಿದ್ದರೆ ಏನೆಲ್ಲವನ್ನು ಕಲಿಯುವುದು, ಕಲಿಸುವುದು ಪ್ರಯಾಸದ ಕೆಲಸವಾಗುತ್ತಿತ್ತು. ಆದರೆ ಅನುಕರಣ ಶೀಲತೆಯು ಇದನ್ನು ಹಗುರಗೊಳಿಸುತ್ತದೆ. ತಂದೆ-ತಾಯಂದಿರ, ಅಣ್ಣ-ತಮ್ಮಂದಿರ, ಅಕ್ಕ–ತಂಗಿಯರ, ನೆರೆ–ಹೊರೆಯುವರ ಕೆಲಸ–ಕಾರ್ಯಗಳನ್ನು ನೋಡಿ ಅವುಗಳಂತೆ ತಾವೂ ಮಾಡಲು ತೊಡಗುತ್ತವೆ. ಕರಿಯು ಕನ್ನಡಿಯೊಳಡಗಿರುವಂತೆ ಇಡೀ ಪ್ರಪಂಚದ, ತತ್ತ್ವಸಾರವೇ ಇವರ ಆಟಗಳಲ್ಲಿ ಪ್ರತಿಬಿಂಬಿಸಿರುತ್ತದೆ.

ಅಂಬೆಗಾಲಿಕ್ಕಿ ಪರಿದಾಡುವುದನ್ನು ಮೊದಲು ಮಾಡಿಕೊಂಡು ನಡೆದಾಡುವವರೆಗೆ ಮಕ್ಕಳು ಭೂಮಿಯನ್ನು ಸರ್ವಾಂಗದಿಂದಲೂ ಸ್ಪರ್ಶಮಾಡುತ್ತವೆ. ಒಳ್ಳೆಯದು–ಕೆಟ್ಟದು, ಹೊಲಸು–ಹಸನು, ಮೃದು–ಕಠಿಣ, ಶೀತ–ಉಷ್ಣ ಇವುಗಳ ಕಲ್ಪನೆ ಇರುವುದಿಲ್ಲ. ಅವುಗಳನ್ನು ಪಡೆದುಕೊಳ್ಳಲೆಂದೇ ಹಾಗೆ ಅವು ಆಡುತ್ತಿರುತ್ತವೆ. ಕವೀಂದ್ರ ರವೀಂದ್ರನಾಥ ಠಾಕೂರ ಅವರು ಸಣ್ಣ ಮಕ್ಕಳಿಗೆ ಬಿಗಿಯಾದ ಬಟ್ಟೆಗಳನ್ನು ತೊಡಿಸುವುದನ್ನು, ಕಾಲ್ಲಲ್ಲಿ ಕಾಲ್ಮರೆಯನ್ನು ಹಾಕುವುದನ್ನು ಕಟುವಾಗಿ

ಟೀಕಿಸಿದ್ದಾರೆ. ಇದರಿಂದ ಅವರಿಗೆ ಬರಬೇಕಾದ ಸ್ವಾಭಾವಿಕ ಜ್ಞಾನದ ಬಾಗಿಲನ್ನು ನಾವು ಮುಚ್ಚಿದಂತಾಗುತ್ತದೆಂದು ಪೇರಿ ಎಚ್ಚರಿಸಿದ್ದಾರೆ.

೧) ಮಳೆಯಾಟ :—

ಮಳೆಯಲ್ಲಿ ನೆನೆಯುವುದೆಂದರೆ ಮಕ್ಕಳಿಗೆ ಬಲು ಇಷ್ಟ. ತಾಯಿಯ ಕಣ್ಣಿನಿಂದ ತಪ್ಪಿಸಿಕೊಂಡು ಅವರು ಬೀದಿಗೆ ಬಂದು ನಿಲ್ಲುತ್ತಾರೆ. ಹನಿ-ಹನಿಯಾಗಿ ಉದುರುವ ಮಳೆಯಲ್ಲಿ ಗುಂಪು ಗೂಡುತ್ತಾರೆ. ಅವರ ಸಂತೋಷ ಉಕ್ಕೇರುತ್ತದೆ. ಪೃಥ್ವಿಯಂತೆ ಪರಿಭ್ರಮಣಕ್ಕೆ ತೊಡಗುತ್ತಾರೆ. ಆ ಭ್ರಮಣಕ್ಕೆ ತಕ್ಕ ಕುಣಿತ. ಕುಣಿತಕ್ಕೆ ತಕ್ಕ ಹಾಡು ಪ್ರಾರಂಭವಾಗುತ್ತದೆ.

ಕಾಳ್ಯಾ ಮಾಳ್ಯಾ । ಕಾಸಾಟಿ ಮಾಳ್ಯಾ
ಸುರಿ ಮಾಳಿಯೇ ಸುರಿ ಮಾಳಿಯೇ
ಸುಣ್ಣಾ ಕೊಡತಿನ । ಸುರಿಯಲೆ ಮಾಳಿಯು
ಬಾಣ್ಣಾ ಕೊಡತಿನ । ಬಾರಲೆ ಮಾಳಿಯು

ಈ ಪಲ್ಲವಿಯನ್ನು ಹೇಳಿಕೊಂಡು 'ಕಾಳ್ಯಾ ಮಾಳ್ಯಾ' ಆಡತೊಡಗುತ್ತಾರೆ. ಕಾರ್ಮೋಡಿನ ಆರ್ಭಟ ಹೆಚ್ಚಾಗುತ್ತದೆ. ಕೋಲ್ಮಿಂಚು ಭೂವ್ಯೋಮವನ್ನು ವ್ಯಾಪಿಸಿ ಬೆಳಗಿ ಮಾಯ ವಾಗುತ್ತದೆ. ಒಂದಿನಿಂದಲೇ 'ಗುಡು ಗುಡು' ಸಪ್ಪಳ ಮಾಡುತ್ತ ಗುಡುಗು ಆಗಮಿಸುತ್ತದೆ. 'ಕಟ್‌ಚಡಲ್' ಎಂದು ಒಮ್ಮೊಮ್ಮೆ ಭಯಂಕರವಾದ ಧ್ವನಿಯನ್ನು ಮಾಡಿ ಹುಡುಗರನ್ನು ಹೆದರಿ ಸುತ್ತದೆ. ಅಲ್ಲಲ್ಲೆ ಆಶ್ರಯ ಪಡೆದು ಮತ್ತೆ ಆಗಮಿಸುತ್ತಾರೆ.

ಗುಡುಗುಡುವ ನಿನಾದ ನಿಧಾನವಾಗಿ ನಡೆದೇ ಇರುತ್ತದೆ. ಇದು ಅವರಿಗೆ 'ಮುತ್ಯಾ' ಆಗುವುದರಲ್ಲಿ ಆಶ್ಚರ್ಯವೇನಿದೆ ? ಗೂರುತ್ತ ಪಡಸಾಲೆಯಲ್ಲಿ ಕುಳಿತ ಮುದುಕನ ಆ ಧ್ವನಿ ಅವರಿಗೆ ನೆನಪಾಗುತ್ತದೆ. ಆ ನೆನಪೇ,

ಗುಡು ಗುಡು ಮುತ್ಯಾ ಬಾಂದಾ ।
ಬೆಣ್ಣಿರೊಟ್ಟಿ ತಾಂದಾ ।
ಹುಡಗುರ ಕಯ್ಯಾಗ್ಕೊಟ್ಟಾ ।
ಹುಡಗುರ ಕುಂಡಿಗೆ ಹ...... ॥

ಹೀಗೆ ಕಾವ್ಯವಾಗಿ ಹೊರಹೊಮ್ಮುತ್ತದೆ. ಕೊನೆಯ ಸಾಲಿನಲ್ಲಿ ಅಶ್ಲೀಲವೆಂದೆನಿಸಿದರೂ ಎಂತಹ ಹೋಲಿಕೆ! ಎಂತಹ ತತ್ತ್ವ ಇದರಲ್ಲಿ ಅಡಗಿದೆ! ಗುಡುಗುಡುವಿಕೆಯು ಮುದುಕನ ಗೂರುವಿಕೆಯನ್ನೋ ಅವನು ಸೇದುವ ಗುಡುಗುಡಿಯ ಸಪ್ಪಳವನ್ನೋ ಪ್ರತಿನಿಧಿಸುತ್ತಿದ್ದರೆ, ಥಳೀರನೆ ಮಿಂಚುವ ಮಿಂಚು ಬೆಣ್ಣಿಯ ಬಿಳುಪನ್ನು. ಇಂತಹ ಬೆಣ್ಣಿ ತಂಪನ್ನೀಯಬಲ್ಲದೆ ? ಇಲ್ಲ. ಸರ್ವವನ್ನು ಭಕ್ಷಿಸಿ ನಾಶಮಾಡುತ್ತದೆ. 'ಹುಡಗುರ ಕುಂಡಿಗೆ ಹ....' ವುದೆಂದರೂ ಸರ್ವನಾಶಮಾಡಿದಂತೆಯೆ. 'ಅತ್ಯಾದರಂ ಮಂಟಲಕ್ಷಣಂ' ಎಂಬ ತತ್ತ್ವವು ಇಲ್ಲಿ ಮಾರ್ಮಿಕವಾಗಿ ಮೂಡಿಬಂದಿದೆ.

ಜೋರಾಗಿ ಮಳೆ ಹೊಡೆಯಲು ಎಲ್ಲೆಡೆಗು ನೀರಾಗುತ್ತದೆ. ಹಾದಿ-ಹಾದಿಯಲ್ಲಿಯೂ ನೀರು ಹರಿದು ಮಳಲು ಕೂಡಿ ಬೀಳು

ತ್ತದೆ. ಕೆಸರು ತೊಳೆದುಹೋಗುತ್ತದೆ. ಮತ್ತೆ ಮಕ್ಕಳು ಅಂಗಳಕ್ಕೆ ಬರುತ್ತವೆ. ಆ ಉಸುಕಿನಲ್ಲಿ ಕಾಲು ಸೇರಿಸಿ ಗುಬ್ಬಿಯ ಗೂಡನ್ನು ಮಾಡಿಯೊ ಹರಿವ ಪ್ರವಾಹಕ್ಕೆ ಒಡ್ಡನ್ನು ಕಟ್ಟಿಯೊ ಆಡಲು ತೊಡಗುತ್ತಾರೆ. ಉಸುಕು ನಿಸ್ಸಾರವಾದುದು. ನೀರಿನ ಜೊತೆಗೆ ಕೂಡಿಕೊಳ್ಳುವದರಿಂದ ಮನೆಯನ್ನು ನಿರ್ಮಿಸಲು ಸಮರ್ಥವಾಗಿದೆ. ಅಧೋಮುಖವಾದ ನೀರೂ ತಡೆಯೊಡ್ಡುವಿಕೆಯಿಂದ ಸಂಗ್ರಹಿತವಾಗಿ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಇದು ಬರಡು ಜೀವನದಲ್ಲಿಯೂ ಆಶಾತಂತುವಿನಿಂದ ಅದನ್ನು ರೂಪಿಸಿಕೊಳ್ಳಬಹುದೆಂಬುದನ್ನು, ಇಂದ್ರಿಯ ವಶವರ್ತಿಯಾಗಿ ಅಧಃಪಥಕ್ಕಿಳಿಯುತ್ತಿದ್ದಾಗ ಅವನ್ನು ನಿಗ್ರಹಿಸಿದರೆ ಎಂತಹ ಸಾಮರ್ಥ್ಯವನ್ನು ಪಡೆಯಬಹುದೆಂಬುದನ್ನು ವ್ಯಕ್ತಗೊಳಿಸುವದಿಲ್ಲವೆ ? ಸಾಕಾಗುವವರೆಗೆ ಆಟವಾಡುತ್ತಾರೆ. ಸಾಕಾದ ಮೇಲೆ ಯಾವ ಕಾಲಿನಿಂದ ಕಟ್ಟಿರುತ್ತಾರೆಯೋ ಅದೇ ಕಾಲಿನಿಂದ ಕೆಡವಿ ನಿಲಿಪಮವಾದಿ ಹೋಗುತ್ತಾರೆ. ಅವರಿಗೆ ಯಾವುದೇ ರೀತಿಯ ಕಳವಳವಿಲ್ಲ. ಇದುವೆ ಸ್ಥಿತಪ್ರಜ್ಞನ ಲಕ್ಷಣ.

ಮಕ್ಕಳು ಒಂದೆಡೆಗೆ ಸೇರಿದಾಗ ಗೊಂಬೆಯಾಟವನ್ನೊ ಇನ್ನೇನನ್ನೊ ಆಡಲು ತೊಡಗುತ್ತವೆ. ತಮಗೆ ಸಿಕ್ಕ ವಸ್ತುವನ್ನೆ ತಮಗೆ ಬೇಕಾದ ವಸ್ತುವನ್ನಾಗಿ ಪರಿವರ್ತಿಸಿಕೊಳ್ಳುತ್ತವೆ. ಗೊಂಬೆಯ ಮದುವೆಯನ್ನು ಮಾಡುತ್ತವೆ. ಅಂಗಡಿಯನ್ನಿಟ್ಟು ವ್ಯವಹರಿಸುತ್ತವೆ. ಗಂಡ-ಹೆಂಡಿರಾಗಿ ಬಾಳ್ವೆ ಮಾಡುತ್ತವೆ. ಸುಖವಾಗಿ ನಕ್ಕು-ನಲಿಯುತ್ತವೆ. ಯಾವುದೋ ಅಲ್ಪ ಕಾರಣಕ್ಕಾಗಿ ಗುದ್ದಾಟ ಪ್ರಾರಂಭವಾಗುತ್ತದೆ. ಎಲ್ಲೆಲ್ಲಿಂದಲೊ ಕೂಡಿದ

ಇವರೆಲ್ಲ ಹೊರಟು ಹೋಗುತ್ತಾರೆ. ಅವರ ಮುಖ ಆ ಕಡೆಗಾದರೆ ಇವರ ಮುಖ ಈ ಕಡೆಗೆ. ಆದರೂ ನಗುತ್ತಲೆ ಅಗಲುತ್ತಾರೆ; ಅಗಲುತ್ತಲೆ ಕೂಡುತ್ತಾರೆ. ಆದರೆ ಅವರ,

ಆಟ ಮುಗಿತೋ । ಕ್ವಾಟ್ಯಾಳಕ್ಹೋತೊ ।
ಗುಡುಗುಡು ಉಳ್ಳಿತೋ । ಗುಂಡ್ಗಲ್ಲ ತತ್ತೊ ॥

ಈ ನಾಡಿನಲ್ಲಿಯಂತೆ ಹಿರಿಯರಲ್ಲಿ ಗುಂಡುಗಲ್ಲನ್ನು ತರಲವದಕ್ಕೆ ಆಸ್ಪದ ಮಾಡಿಕೊಡುತ್ತದೆ. ಮಕ್ಕಳು ಏನೆಲ್ಲವನ್ನು ಮರೆತು ಕೂಡಿ ಆಡುತ್ತಿದ್ದರೂ ಹಿರಿಯರಲ್ಲಿಯ ದುಮುದುಮಿ ಉಳಿದೆ ಉಳಿಯುತ್ತದೆ. 'ಗುಂಡ್ಗಲ್ಲ ತತ್ತೊ' ಎಂಬುದು ಧ್ವನಿಪೂರ್ಣವಾಗಿದೆ.

೨) ಕಣ್ಣು ಮುಚ್ಚಣಿಕೆಯ ಆಟ

ಕಣ್ಣುಮುಚ್ಚಣಿಕೆಯ ಆಟ ಮಕ್ಕಳಲ್ಲಿ ತೀರ ಪ್ರಸಿದ್ಧವಾದುದು. ಇದರಲ್ಲಿಯೇ ಒಬ್ಬರು ಹಿರಿಯರಾಗಿ ಆಟವನ್ನು ನಡೆಸಿಕೊಂಡು ಹೋಗುತ್ತಾರೆ. ಉಳಿದವರೆಲ್ಲ ಮೂರು ಮೂರು ಜನರಾಗಿ 'ಚಕಾಸು'ತ್ತಾರೆ. ಸಾಮಾನವಾಗಿ ಗುಂಪಿನೊಳಗಿಂದ ಒಬ್ಬರನ್ನು ಹೊರದೆರೆಯಬೇಕಾದಾಗ ಈ ವಿಧಾನವನ್ನು ಅನುಸರಿಸಲಾಗುತ್ತದೆ. ಮೂವರು ಕೈಕೈ ಹಿಡಿದು ಒಮ್ಮೆಲೆ ಬಿಟ್ಟು ತಮ್ಮ-ತಮ್ಮ ಕೈಗಳನ್ನು ಅಂಗತ್ತಾದ ಕೆಳಗಿನ ಕೈಯ ಮೇಲೆ ಇನ್ನೊಂದನ್ನು ಅಂಗತ್ತಾಗಿಯೊ ಡಬ್ಬಾಗಿಯೊ ಹಾಕುವರು. ಇಬ್ಬರದು ಒಂದು ತೆರನಾದರೆ ಇನ್ನೊಬ್ಬರದು ಇನ್ನೊಂದು ತೆರನಾಗುತ್ತದೆ. ಒಬ್ಬರಾದವರು ಪಾರಾಗುತ್ತಾರೆ. ಹೀಗೆ ಪಾರಾ

ಗುತ್ತ ಕೊನೆಗೆ ಇಬ್ಬರು ಉಳಿದಾಗ ಮೊದಲಿನವರು ಬಂದು ಉಪ್ಪುಕೂಡಿಸುತ್ತಾರೆ. ಆಗ ಉಳಿದಿಬ್ಬರಲ್ಲಿ ಒಬ್ಬರು ಪಾರಾದ ಮೇಲೆ ಉಳಿದವರ ಮೇಲಿಂದು ಕಣ್ಣುಮುಚ್ಚಿಕೊಳ್ಳುವ ಸರತಿ ಬರುತ್ತದೆ. ಹಿರಿಯ ಹುದ್ದರಿ ಕಣ್ಣು ಮುಚ್ಚಲು ಉಳಿದವರು ಸಾಲಾಗಿ ಮುಂದುಗಡೆಯಲ್ಲಿ ನಿಲ್ಲುತ್ತಾರೆ. ಕಣ್ಣುಮುಚ್ಚಿದಾಕ್ಷಣವೆ ಎದುರಿಗಿದ್ದವರು ಅವಲು ಬದಲಾಗುತ್ತಾರೆ. ಹಿರಿಯ ಹುದ್ದರಿ

ಕಾವಲ್ ಬಿದಲ್ । ಕಂಚ್ಯಾಣ ಬಿಂಚ್ಯಾಣ
ಇವರ ಬಿಟ್ಟು ಇವರ್ಯಾರ್ ।

ಎಂದು ಕೇಳಲಾಗಿ ಕಣ್ಣು ಮುಚ್ಚಿಕೊಂಡ ಮಗು ಒಬ್ಬರ ಹೆಸರನ್ನು ಹೇಳುತ್ತದೆ. ಇಲ್ಲಿ ಆ ಮಗುವಿನ ಜಾಣಾಕ್ಷತೆಯನ್ನು ನೋಡಬಹುದು. ಅವಲು ಬದಲಾಗುವ ಸಮಯದಲ್ಲಿ ಅವರ ಸಪ್ಪಳದಿಂದಲೊ ಪಿಸುಮಾತಿನಿಂದಲೊ ನಿರ್ದಿಷ್ಟ ವ್ಯಕ್ತಿಯನ್ನು ಗುರುತಿಸಿ ಹೇಳಬೇಕಾಗುವುದು. ಹಾಗೆ ಒಂದು ವೇಳೆ ನಿರ್ದಿಷ್ಟ ಹೆಸರನ್ನೆ ಹೇಳಿದರೆ ಕಣ್ಣು ಮುಚ್ಚಿಕೊಳ್ಳುವ ಸರತಿ ಆ ಮಗುವಿನದಾಗುತ್ತದೆ. ಇಲ್ಲವಿದ್ದರೆ ಅದಕ್ಕೆ ಹೋಗಲು ಹೇಳಿ, ಇನ್ನೊಬ್ಬರನ್ನು ಕೇಳಲಾಗುತ್ತದೆ. ಹೀಗೆ ಎಲ್ಲರು ಮುಗಿದ ಮೇಲೆ,

ಬಿಟ್ಟಿ ಬಿಟ್ಟಿ ಬೆಳಗಾಯ್ತೊ ।
ತಟ್ಟಿಮನಿ ಹಾಳಾಯ್ತೊ ।
ಹಾಳ ಗ್ಯಾಡ್ಯಾನ ದೆವ್ವ ಬಾಂದ ಬಡೀತೊ ॥

ಎಂದು ಕಣ್ಣು ಬಿಡುತ್ತಾನೆ. ಈ ಎಚ್ಚರಿಕೆ ಮುಗಿಯುವುದರಲ್ಲಿಯೇ ಮೊದಲೆ ಓಡಿ ಹೋದವರು ಅಲ್ಲಲ್ಲಿ ಅಡಗಿಕೊಳ್ಳುತ್ತಾರೆ, ಮುಟ್ಟಲು ಬಂದ ಮೇಲೆ ಅವರು ಒಬ್ಬೊಬ್ಬರಾಗಿ

ಪಚೆ'ಗೆ ಬಂದು ಮುಟ್ಟುತ್ತಾರೆ. 'ತೂಸಿಗ್ಯೊ' ಎನ್ನುತ್ತಾರೆ. 'ಪಚೆ' ಎನ್ನುವುದು ಬಹುತರವಾಗಿ 'ಪಯಚೆ'-ಪ್ರತಿಜ್ಞೆ ನಿರ್ದಿಷ್ಟ ಸ್ಥಳ ಎಂಬುದೆ ಆಗಿರಬೇಕು. ಆದರೆ 'ತೂಸಿಗ್ಯೊ' ಎನ್ನುವುದರ ಅರ್ಥವೇನೆಂಬುದು ನಿರ್ದಿಷ್ಟವಾಗಿ ಆಗುವಂತಿಲ್ಲ.

ಈ ಕಣ್ಣು ಮುಚ್ಚಣಿಕೆ ಆಟದಲ್ಲಿ ದೈಹಿಕವಾದ ಪರಿಶ್ರಮ ವಿದೆ. ಮಕ್ಕಳು ಎಷ್ಟೋ ಹೊತ್ತು ಓಡ್ಯಾಡುವುದರಲ್ಲಿ ಸಾಕಷ್ಟು ವ್ಯಾಯಾಮವಾಗುತ್ತದೆ. ಜೊತೆಗೆ ಪ್ರೈತುಂಬ ಎಚ್ಚರ ವನ್ನು ವಹಿಸಬೇಕಾಗುವುದರಿಂದ ಚುರುಕುತನವು ಬೆಳೆಯುತ್ತದೆ.

ಗುಂಪುಗೂಡಿಕೊಂಡು ಆಡುವ ಆಟಗಳಲ್ಲಿ 'ಲೋಳ ಮುರಗಿ' 'ಬುಡ ಬುಡ ಚಾಣಕ್ಕಿ' 'ಗುಮ್ಮಾಚಾರಿ ಗುಮ್' ಇವು ಅಂಗಳದಲ್ಲಿ ಆಡುವ ಆಟಗಳು.

೩) ಲೋಳ ಮುರಿಗೆ

ಲೋಳಮುರಿಗೆಯು ಮೈಮರೆಸಿಕೊಂಡು ಕೂಡ್ರುವ ಆಟವಲ್ಲ. ಯಾವಾಗಲು ಜಾಗರೂಕವಾಗಿರಬೇಕು. ಇಲ್ಲಿ ಮಕ್ಕಳೆಲ್ಲ ದುಂಡಗೆ ಕುಳಿತುಕೊಳ್ಳುತ್ತಾರೆ. ಅವರಲ್ಲಿ ಒಬ್ಬ ಅರಿವೆಯ ತುಂಡನ್ನು ಮುರಿಗೆ ಹಾಕಿ ಮಾಡಿದ ಒಂದು ಲಡ್ಡನ್ನು ಕೈಯಲ್ಲಿ ಅಡಗಿಸಿ ಹಿಡಿದುಕೊಂಡು,

ನೋಡ ನೋಡ ತಿಮ್ಮಯ್ಯಾ ।

ಎಂದು ಒಂದು ಪಲ್ಲವಿಯನ್ನು ಹೇಳಿದರೆ, ಕುಳಿತವರು

ಬಡ್ಡಾ ಬುಟ್ಟಿ ಎಲ್ಲಿಟ್ಟಿ* ।

---

* ಲೋಡ ಲೋಡ ತಿಮ್ಮಯ್ಯಾ ।
ಗಾಡ್ಡಾ ಎಲ್ಲಿ ಮುಚ್ಚಿಟ್ಟಿ । ಈ ರೀತಿಯಾಗಿಯೂ ಕೇಳುವದು ಉಂಟು.

ಎಂಬುದನ್ನು ಸೇರಿಸುತ್ತಾರೆ. ಹೀಗೆ ಹಾಡಿನಲ್ಲಿ ಮರೆಸಿ, ಸುತ್ತುತ್ತಲೆ ಆ ಲಡ್ಡನ್ನು ಒಬ್ಬರ ಹಿಂದೆ ಇಡುತ್ತಾನೆ. ಹಿಂದೆ ಇರಿಸಿಕೊಂಡ ಮಗು ಅವನ್ನು ಗುರುತಿಸಿ ತೆಗೆದುಕೊಂಡು ಅವನನ್ನು ಅವರಿಂದ ತನ್ನ ಸ್ಥಾನಕ್ಕೆ ಬರುವವರೆಗೆ ಹೊಡೆಯಬಹುದು. ಒಂದು ವೇಳೆ ಅವನು ತಿರುಗಿ ಬರುವವರೆಗೆ ಅದನ್ನು ಗುರುತಿಸದೆ ಹೋದರೆ ಬಂದವನು ಆ ಲಡ್ಡಿನಿಂದ ಹೊಡೆದು ಎಬ್ಬಿಸಿ ಸುತ್ತಿ ಅಲ್ಲಿಗೆ ಬರುವವರೆಗೆ ಹೊಡೆಯುತ್ತಾನೆ. ಲಯಬದ್ಧವಾದ ಹಾಡು ಹಾಗೆಯೇ ಮುಂದುವರಿಯುತ್ತದೆ.

೪) ಬುಡಬುಡು ಚಾಣಕ್ಕಿ

ಬುಡು ಬುಡು ಚಾಣಕ್ಕಿಯೂ ಲೋಳಮುರಿಗೆಯ ಮಾದರಿಯ ಆಟ. ಆದರೆ ಇಲ್ಲಿ ಎತ್ತರವಾದವನೊಬ್ಬನು ಮಧ್ಯದಲ್ಲಿ ನಿಲ್ಲುತ್ತಾನೆ. ಉಳಿದವರು ಅವನ ಸುತ್ತು ಮುತ್ತು ನೆರೆಯುತ್ತಾರೆ. ಒಂದು ದುಂಡುಗಿನ ಮಂಡಲವನ್ನು ಕೊರೆದಿದ್ದು ಅದರ ಹೊರಗಡೆಯಲ್ಲಿ ಇನ್ನೊಬ್ಬನು,

"ಬುಡು ಬುಡು ಬುಡು ಬುಡು ಚಾಣಕ್ಕಿ"

ಎನ್ನುತ್ತ ತಿರುಗುವನು. ಮಧ್ಯದಲ್ಲಿರುವವರು,

"ಏನ ಬೇಕ ಕುಂಡಡಕಿ"

ಎಂದು ಕೇಳುತ್ತಾರೆ. ಅದಕ್ಕೆ,

'ಹಾಬ್ಬಕೊಂದ ಗಾಬ್ಬದ ಮರಿ'

ಎಂಬ ಉತ್ತರ. ಮತ್ತೆ

'ಯಾವ ಮರಿ ?'

ಎಂಬ ಪ್ರಶ್ನೆ. ಆಗ ಹೊರಗಿದ್ದವನು ಒಬ್ಬರ ಹೆಸರು ಹೇಳಿ ಅವನನ್ನು ಎಳೆದುಕೊಳ್ಳುತ್ತಾನೆ. ಗುಂಪಿನಲ್ಲಿದ್ದವರು ಅವನನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಕೆಲವೊಮ್ಮೆ ಅವನು ಓಡಿಹೋಗುತ್ತಿದ್ದಂತೆ ಒಳಗಿನವರು ಅವನನ್ನು ಒಡಿಯಲು ತವಕಿಸುತ್ತಾರೆ. ಅವನು ತಪ್ಪಿಸಿಕೊಂಡು ಹೊರ ಹೋಗುತ್ತಾನೆ. ಹೀಗೆಯೆ ಆಟ ಎಲ್ಲರೂ ಮುಗಿಯುವವರೆಗೆ ಮುಂದುವರಿಯುತ್ತದೆ.

೫) ಗುಮ್ಮಾಚಾರಿ ಗುಮ್

ಕೋಳಿಮುರಿಗೆಯಲ್ಲಿ ದುಂಡಗೆ ಕೂಡ್ರಿಸಿರುವಂತೆ 'ಗುಮ್ಮಾಚಾರಿ ಗುಮ್'ದಲ್ಲಿ ನಿಲ್ಲಿಸಿರುತ್ತಾರೆ. ಒಳಗೊಬ್ಬರು ಹೊರಗೊಬ್ಬರು ಆಗಿ ಇಬ್ಬರೂ ಬೆರಳಲ್ಲಿ ಬೆರಳನ್ನು ಹಾಕಿ ಕೈಗಳನ್ನು ಕೂಡಿಸಿ ಎಲ್ಲರೂ ತಲೆಯ ಮೇಲೆ ಹಾಯಿಸುವಂತೆ ಸುತ್ತ ತಿರುಗುತ್ತಾರೆ. ಹೀಗೆ ತಿರುಗುವಾಗ.

ಹತ್ತಂಬಳ್ಳಾ । ಹಾಲೂ ಒತ್ತಾ ।
ನಾಯಿಗೆ ನುಚ್ಚಾ । ಹಾಕೇಲಿಲ್ಲ ।
ಗಿಣೀಗೆ ಬ್ಯಾಲ್ಯಾ । ತಿನಸೇಲಿಲ್ಲ ।
ಗುಮ್ಮಾಚಾರಿ ಗುಮ್ ಗುಟಕ್ ।
ಪಾರಿವಾಳ ಪಾಟಕ್ ।
ಎಣ್ಣಿs ಕಾಟಕ್ ।

ಹಿಂದು ಒಬ್ಬರ ಮೇಲೆ ತಮ್ಮ ಕೈಗಳನ್ನಿಟ್ಟು,

ಅವ್ವನ ಕೊಡತನ ಕುಂದ್ರ। ಅಪ್ಪನ ಕೊಡತನ ಕುಂದ್ರ

ಎನ್ನುತ್ತ ಅವರು ಕೂಡ್ರುವವರೆಗೆ ಅಣ್ಣ, ತಮ್ಮ, ಅಕ್ಕ, ತಂಗಿ, ಗಂಡ, ಹೆಂಡತಿ (ಪ್ರಸಂಗ ನೋಡಿಕೊಂಡು), ಬೆಳ್ಳಿ,

ಬಂಗಾರ ಕೇಳುತ್ತಾರೆ. ಯಾವುದನ್ನು ಕುರಿತು ಕೇಳಿದಾಗ ಕುಳಿತು ಕೊಳ್ಳುವರೊ ಅವರ ಮೇಲೆ ಪ್ರೀತಿಯಿಂದು ಉಳಿದವರು ಹೇಳಿ ನಗುತ್ತಾರೆ. ಮನಶ್ಶಾಸ್ತ್ರದ ಸೂಕ್ಷ್ಮತೆಯನ್ನು ಇಲ್ಲಿ ಕಾಣ ಬಹುದಾಗಿದೆ.

೬) ಹತ್ತಿ ಕಟಿಗಿ ಬತ್ತಿ ಕಟಿಗಿ

ಓಡಿಯಾಡಿ ದಣಿದಾಗ ಇಲ್ಲವೆ ಓಡಾಡುವುದಕ್ಕೆ ಸಾಧ್ಯ ವಿಲ್ಲವಾಗ ಒಂದೆಡೆಯಲ್ಲಿ ಕುಳಿತು ಆಟವಾಡುತ್ತಾರೆ. ಇಲ್ಲಿ ಅವ ರಿಗೆ ಯಾವ ಸಾಮಗ್ರಿಯೂ ಬೇಕಾಗಿಲ್ಲ. ಒಬ್ಬನು ಹಿರೇಹುದ್ದರ. ಅವನ ಮುಂದೆ ಉಳಿದವರು ಕೂಡ್ರುತ್ತಾರೆ. ತಮ್ಮ ಎರಡೂ ಕೈಗಳನ್ನು ಡಬ್ಬಾಗಿ ಮುಂದಿಡುತ್ತಾರೆ. ಹೀಗೆ ಎಲ್ಲರು ಕೈಗಳನ್ನಿಟ್ಟ ಮೇಲೆ ಹಿರಿಯನಾದವನು ತಾನೂ ಒಂದು ಕೈಯನ್ನು ಡಬ್ಬಾ ಗಿಟ್ಟು ಇನ್ನೊಂದು ಕೈಯಿಂದ ಒಂದೊಂದೇ ಕೈಯನ್ನು ಮುಟ್ಟುತ್ತ,

ಹತ್ತಿ ಕಟಗಿ। ಬತ್ತಿ ಕಟಗಿ।
ಬಾಣವನ್ನೀರ। ಬಸನ್ನೀರ।
(ಬಾಣಾನ್ನೂರ। ಬಸವ್‌ನೂರ)!
ಕೈ ಕೈ। ದೂಳಗೈ।
ಹಂಚವ್‌। ಹುಗಡವ್‌।
ಎದಿಮ್ಯಾಲ। ಮಿಂಚವ್‌।
ಕಾಳವ್‌। ಗೆಜ್ಜವ್‌।
ಹಡೋಲ್‌॥

ಎನ್ನುತ್ತಲಿ ಎಲ್ಲರು ತಮ್ಮ ಕೈಗಳನ್ನು ಬಗಲಲ್ಲಿಯೋ ಬೆಚ್ಚಗಾಗುವಂತೆ ಇನ್ನೆಲ್ಲಿಯೋ ಇಟ್ಟುಕೊಳ್ಳುತ್ತಾರೆ. ಒಂದೆರಡು

ನಿಮಿಷಗಳ ಮೇಲೆ ಒಬ್ಬೊಬ್ಬರಾಗಿ ಕೈಗಳನ್ನು ಹೊರದೆರೆದು ಒಂದಕ್ಕೊಂದು ತಿಕ್ಕಿ ಬಿಸಿಯಾಗುವಂತೆ ಮಾಡಿ ಹಿರಿಹುದ್ದರಿಯ ಗಲ್ಲಕ್ಕೆ ಹಚ್ಚುತ್ತಾರೆ. ಯಾರ ಕೈ ಬಿಸಿಯಾಗಿರುವದಿಲ್ಲವೊ ಅಂಥವರನ್ನು ಹೀಯಾಳಿಸುತ್ತಾರೆ.

ಬಹುತರವಾಗಿ ಇಂತಹ ಆಟಗಳನ್ನು ಚಳಿಹತ್ತಿದಾಗ ಆಡುತ್ತಾರೆ. ಚಳಿಯ ನಿವಾರಣೆಗಾಗಿ ಇರುವ ಒಂದು ಉಪಾಯ ವಿದು. ಎರಡೂ ಕೈಗಳನ್ನು ಜೋರಾಗಿ ತಿಕ್ಕುವುದರಿಂದ ಕೈಗಳು ತಾವಾಗಿಯೇ ಬಿಸಿಯಾಗುತ್ತವೆ. ರಕ್ತ ಸಂಚಲನದಿಂದ ಇಡೀ ದೇಹವನ್ನು ವ್ಯಾಪಿಸಿ ಬಿಸಿದಾಗಿಸುತ್ತದೆ. ಚಳಿಹೊರಟು ಹೋಗುತ್ತದೆ. ಆಡುವುದರಲ್ಲಿಯೇ ಇಂತಹ ಒಂದು ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ ಮಕ್ಕಳು.

೭) ದಡವನ್ ದುಡಕಿ

ಮಕ್ಕಳವನಗಳಲ್ಲಿ ಕಬ್ಬಿಣದಿಂದ ಮಾಡಿದ ಈ ಆಟಿಗೆಯನ್ನು ಇಂದು ಕಾಣುತ್ತೇವೆ. ಇದು ದೊಡ್ಡ-ದೊಡ್ಡ ಊರುಗಳಲ್ಲಿ ಸಾಧ್ಯ. ಆದರೆ ಈ ಆಟ ಹಳ್ಳಿಗಳಲ್ಲಿ ಸರ್ವಸಾಮಾನ್ಯ. ಅವರಿಗೆ ಆಧುನಿಕವಾದ ಈ ಉಪಕರಣ ಬೇಕಾಗಿಲ್ಲ. ಓಣಿಯಲ್ಲಿ ಬಿಟ್ಟ ಚಕ್ಕಡಿಯ ನೊಗವೆ ಇವರಿಗೆ ಆಟಿಗೆಯ ಸಾಧನ. ಈಸುಗಳೇ ಆಧಾರ ಬಿಂದು. ಎರಡೂ ತುದಿಗಳಿಗೆ ಒಬ್ಬೊಬ್ಬರು ಸಾಮಾನ್ಯವಾಗಿ ಒಂದೇ ತೂಕಿನವರು ಕುಳಿತುಕೊಂಡು ಸರತಿಯಂತೆ ಮೇಲೆ ಕೆಳಗೆ ಮಾಡಿ ಆಡುವರು. ಆಡುತ್ತಿದ್ದಂತೆಯೇ;

ದಡವನ್ ದುಡಕಿ । ಪಾಂಚೇರಾಡಕಿ ।
ನಾಮ್ಯಾತ್ರಿ ಕೊಟ್ಯಾಳ । ಸೇರಾಡಕಿ ।
(ಚೂರಚೂರ ಆಡಕಿ)

ಈ ಹಾಡನ್ನು ಹಾಡುವರು. ಒಬ್ಬರಾದವೇಲೆ ಒಬ್ಬ ರಂತೆ ಪಾಳಿಪ್ರಕಾರ ಆಡುವರು. ಜೀವನದಲ್ಲಿಯು ಎರಿಳಿತಗಳಲ್ಲಿ ತೂಕವಿರಬೇಕೆನ್ನುವುದೇ ಇಲ್ಲಿಯ ಗುಟ್ಟು.

ಗಂಡು ಮಕ್ಕಳ ಆಟಗಳು

ಹಳ್ಳಿಗಳಲ್ಲಿ ಗಂಡುಮಕ್ಕಳು ಆಡುವ ಆಟಗಳು ಮುಖ್ಯ ವಾಗಿ ಗುಂಡ, ಬೊಗರಿ, ಚಿಣಿ–ದಾಂಡು (ಚಿಣಿ-ಪಣಿ), ಚಿರ್ ಗೋಣಾ, ಸರಿಗೆರಿ(ಕಿಳ್ಳಿ), ಜೋಜೊ, ಹುತುತು, ಸರಗಿತ್ತ, ಕೀಕೀಕಿಲಾರಿಗ್ಯೊ ಇವೆಂದು ಹೇಳಬಹುದು. ಇವುಗಳಲ್ಲಿ ಕೆಲ ವನ್ನು ಹಾಡುತ್ತ ಆಡುತ್ತಿದ್ದರು. ಇನ್ನುಳಿದವುಗಳನ್ನು ಹಾಗೆಯೇ ಆಡುತ್ತಾರೆ. ಇವೆಲ್ಲವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವು ಎಷ್ಟು ಅರ್ಥವತ್ತಾಗಿವೆಯೆಂಬುದು ವ್ಯಕ್ತವಾಗುವುದು. ಅಂದು–ಇಂದೂ ಕೂಡ ರೀತಿ ಬೇರೆ ಮನುಷ್ಯ ಹೋರಾಟ ದಿಂದಲೇ ತನ್ನ ಜೀವನವನ್ನು ಸಾಗಿಸಬೇಕಾಗುತ್ತಿತ್ತು. ಅಂತೆಯೇ ತನ್ನ ದೇಹದ ಕಡೆಗೆ ಅವನ ಗಮನ ಹೆಚ್ಚಾಗುವುದು ಸ್ವಾಭಾ ವಿಕ; ಏಕೆಂದರೆ, ವೈರಿಗಳಿಂದ ಸಂರಕ್ಷಣೆಯನ್ನು ಪಡೆಯಲು ಹೋರಾಟ ಅನಿವಾರ್ಯವಾಗಿತ್ತು. ಹಿರಿಯರಷ್ಟೇ ಏಕೆ, ಮಕ್ಕಳೂ ತಮಗರಿಯದೆ ಈ ಹೋರಾಟಕ್ಕೆ ಅಣಿಯಾಗುತ್ತಿ ದ್ದರು. ಅದೂ ಆಟದ ಮುಖಾಂತರವೆಂಬುದನ್ನು ನೆನೆಸಿ ಕೊಂಡರೆ ಆಶ್ಚರ್ಯವಾಗಬಹುದು.

ಗುಂಡು, ಚೆಂಡು, ಬೊಗರೆ, ಚಿಣಿದಾಂಡುಗಳು ಅಷ್ಟೊಂದು ಆಯಾಸವಿಲ್ಲದೆ ಆಡುವಂತಹವುಗಳಿದ್ದು ಗುರಿ ಹೊಡೆಯುವುದನ್ನು ಕಲಿಸುತ್ತಿದ್ದರೆ, ಸರಿಗೆರಿ, ಸರಗಿತ್ತ ಇವು

ಚಕ್ರವ್ಯೂಹದಂತಹ ಕೋಟೆಯನ್ನು ಹೇಗೆ ಭೇದಿಸಬೇಕೆಂಬುದನ್ನು ತಿಳಿಸುತ್ತವೆ. ಬೋಬೊ, ಹುತುತುಗಳು ದೇಹದ ಆರೋಗ್ಯವನ್ನು ಕಾಪಾಡುವಲ್ಲಿ ಸಾಧನಗಳಾದರೆ ಚಿರ್‌ಗೋಡಾದಂತಹವು ಅವು ಎಂತಹ ಪ್ರಸಂಗವಲ್ಲಿಯೂ ಎಷ್ಟು ಕಷ್ಟವಾದರೂ ತಾಳ್ಮೆಯಿಂದಿರಬೇಕೆಂಬುದಕ್ಕೆ ಅಣಿಗೊಳಿಸುತ್ತವೆ. ಕೀಕೀಕಿಲಾರಿಗೊ ಎಂಬಂತಹ ಆಟಗಳು ಹೋರಾಟದ ಕಾಲದಲ್ಲಿ ವೈರಿಯನ್ನು ಹೇಗೆ ಗುರುತಿಸಬೇಕೆಂಬುದನ್ನು, ತಾವು ಹೇಗೆ ಪಾರಾಗಬೇಕೆಂಬುದನ್ನು ತಿಳಿಸುತ್ತವೆ.

೧) ಗುಂಡಿನಾಟ

ಈ ಹಲವು ವಿಧವಾದ ಆಟಗಳಲ್ಲಿ ಸಾಹಿತ್ಯವನ್ನೊಳಗೊಂಡವುಗಳೆಂದರೆ, ಗುಂಡು ಮತ್ತು ಚಿಣಿ ದಾಂಡುಗಳೆರಡೆ. ಗುಂಡು ಆಡುವುದರಲ್ಲಿ ಅನೇಕ ವಿಧ. ಅವುಗಳಲ್ಲಿ ಒಂದು ಎರಡು ಎಣಿಸುವುದು, ಒಂದು ಹಾಗೆ ಎಣಿಸುತ್ತ ಹತ್ತರವರೆಗೆ ಮುಟ್ಟಿದ ಮೇಲೆ ಅವರು ಪಾರಾದಂತೆ. ಹೀಗೆ ಪಾರಾಗುತ್ತ ಗುಂಪಿನಲ್ಲಿಯ ಯಾರು ಕೊನೆಗೆ ಉಳಿಯುತ್ತಾರೆಯೊ ಅವರು ಸೋತಂತೆ. ಅಂಥವರು ಪಚೆಯಿಂದ ಪೀಕಬೇಕಾಗುತ್ತದೆ. (ದೇಕು) ಪೀಕುತ್ತಾರೆ. ಪಾರಾದವರು ಸರತಿಯಂತೆ ಕುಣಿಯಿಂದ ಹೊಡೆಯುತ್ತಾರೆ. ಅವರು ಹೊಡೆಯುವುದನ್ನು ತಪ್ಪಿದಮೇಲೆ ಪೀಕುವವನು ಕುಣಿ ತುಂಬಿಸಿದರೆ ಅವನ ಆಟ ಮುಗಿಯುತ್ತದೆ. ಈ ಪ್ರಕಾರ ಎಲ್ಲರು ಮುಗಿದಮೇಲೆ ಆ ಆಟ ಕೊನೆಗೊಳ್ಳುತ್ತದೆ. ಇಲ್ಲಿ ಒಂದು ಎರಡು ಎಂಬುದನ್ನು ಹಾಗೆಯೇ ಅನ್ನದೆ ಅವಕ್ಕೆ ಒಂದು ಪದ್ಯಸ್ವರೂಪಕೊಟ್ಟು ಹಾಡುತ್ತಲೇ ಆಡುತ್ತಾರೆ. ಇದು ಒಂದು ಭಾಗ

ದಿಂದ ಇನ್ನೊಂದು ಭಾಗಕ್ಕೆ ಬೇರೆ ಬೇರೆಯಾಗಿರುತ್ತದೆ. ಬಹುತರವಾಗಿ ತನ್ನ ತನ್ನ ಭಾಗದ ವಾತಾವರಣಕ್ಕೆ ಹೊಂದಿಕೆಯಾಗುವಂತೆ ಇವನ್ನು ಹೆಣೆಯುತ್ತಾರೆ.

ಒಂದ ನಿನ್ನ ಕೊಂದ ಒಗದಿನ
ಎರಡ ನಿನ್ನ ಗ್ಯಾಡ್ಡಿಗೆ ಹೊಡದಿನ।
ಮೂರ ನಿನ್ನ ಮೂಲ್ಯಾಗ್ಹಾಕಿನ।
ನಾಕ ನಿನ್ನ ನಾಲಗಿ ಕೋದಿನ।
ಅಯ್ದ ನಿನ್ನ ಕಯ್ದಕ ಹಾಕಿನ।
ಆರ ನಿನ್ನ ಹಾರಿ ಬಿಟ್ಟಿನ।
ಯೋಳ ನಿನ್ನ ಗೋಳಕ ಹಾಕಿನ।
ಎಂಟ ನಿನ್ನ ಗಾಂಟ್ಲಾ ಒಡದಿನ।
ಒಂಬತ್ತ ನಿನ್ನ ಕಾಂಬಕ ಬಿಗದಿನ।
ಹತ್ತ ನಿನ್ನ ಹತ್ತಿ, ಇಟ್ಟೀನ।

ಈ ಪದ್ಯವನ್ನು ಅವಲೋಕಿಸಿದಾಗ ಇಲ್ಲಿ ಕೆಲವು ಅಶ್ಲೀಲ ಪದಗಳು ಕಂಡು ಬರುವುದೇನೋ ನಿಜ. ಆದರೆ ಅಲ್ಲಿ ಒಂದು ರೀತಿಯ ವಿನೋದವೇ ಗೋಚರಿಸುತ್ತದೆ. ಈ ನುಡಿಗಳನ್ನು ಅನ್ನುತ್ತ ಆಡುತ್ತಿರುವ ಆ ಹುಡುಗರ ಸಡಗರವನ್ನು (ರೀತಿ) ನೋಡಬೇಕು. ಆಟವನ್ನಾಡುತ್ತಿರುವಂತೆ ಅವರಿಗೆ ಇನ್ನಾವುದೂ ಬೇಕಾಗುವುದಿಲ್ಲ. ಹಸಿವು ನೀರಡಿಕೆಗಳನ್ನು ಮರೆಯುತ್ತಾರೆ; ಅಷ್ಟೊಂದು ಏಕಾಗ್ರತೆ ಆಡುವುದರಲ್ಲಿ.

ಎಣಿಕೆಯನ್ನು ಮಾಡುವಲ್ಲಿರುವ ಇನ್ನೂ ಕೆಲವು ವಿಧಾನಗಳನ್ನು ಇಲ್ಲಿ ನೋಡಬಹುದು:

೧) ಏಕಾ ರಾಜಾ
ಗುಬ್ಬಿ ರಾಜಾ
ತಿರಾಣಿ ಬೋಜಾ
ಚಾರಿ ಚೌಕಟ್
ಪಂಚಲ ಪಾಂಡು
ಸರ್ಯ್ಯಾ ದಾಂಡು
ಸತ್ತಲ ನವಿಲೆ
ಅಟ್ಟ ಅಡಿಕೆ
ನವನವ ಪಲ್ಲಾ
ದಸ್ಸಿ ಗುಂಡಾ ॥

೨) ಎಕಲಕ ರಾಜಾ
ಡಬ್ಬಿ ರಾಜಾ
ತಿರಾಣಿ ಬೋಜಾ
ಚಾರಿ ಚಂಡು
ಪೇಸ ಪೆಂಡು
ಸೇನ ದಂಡು
ಸೇತ ರಾವಳಾ
ಆಟೋ ಲೇಟ
ಮುಂಬಯಿ ದಾರಾ
ಚಿಮಣಿ ಹಜಾರಾ ॥

ಈವೆರಡು ವಿಧಾನಗಳು ಒಂದು ಛಾಯೆಯಲ್ಲಿ ಮೂಡಿ ಬಂದವುಗಳಾದರೆ,

೩) ಏಕಾ ಡಬ್ಬಾ
ಯಾರಗಳ ಸಿದ್ದಾ
ಮುರಗಳಾ ತ್ವಾಟ
ನಾರಾಳಂಗಿ
ಅಯ್ದರ ಗಡಬಾ
ಆರ ಸರಾಪಾ
ಯೋಳ ಜುಂಜುಗಾ
ಎಂಟರ ಗಾಂಟ
ಒಂಬಯ್ ನುರಗಾ
ತಗಡನ ಬುರಗಾ ॥

೪) ಎಕಲಕ ತಂತಿ
ತಂತಿಗೊಂದ ಬೇರಾ
ಮನಮುಕ ಚೂಜಿ
ನಾಕಾಳಂಗಿ
ಅಯ್ದರ ಗಡಬಾ
ಆರ ಸರಾಪಾ
ಯೋಳ ಜುಂಜುಗಾ
ಎಂಟ ಮಂಟಪಾ
ಒಂಬತ್ತ ಮಾಲಗಾಡಿ
ಶಂಬತ್ತ ಪೀಕ ನಡಿ ॥

ಇವು ಇನ್ನೊಂದು ರೀತಿಯಲ್ಲಿ ರೂಢಿಯಾದವುಗಳು. ಇವುಗಳಲ್ಲಿಯ ಎರಡನೆಯ ಮತ್ತು ನಾಲ್ಕನೆಯ ವಿಧಾನಗಳು ನವೀನವಾದವುಗಳೆಂದೋ ಅಥವಾ ಹೊಸ ಶಬ್ದಗಳನ್ನು

ಕೂಡಿಸಿಕೊಂಡವುಗಳಿಂದೋ "ಮುಂಬಯಿ ದಾರಾ" 'ಚಿಮಣಿ ಪಜಾರಾ' 'ಒಂಬತ್ತ ಮಾಲಗಾಡಿ' ಈ ಉದಾಹರಣೆಗಳಿಂದ ತಿಳಿಯಬಹುದಾಗಿದೆ. ಇವುಗಳಲ್ಲಿಯ ರಚನೆಯ ವಿಧಾನವು ಹೆಚ್ಚು ಸಾಹಿತ್ಯಿಕವಾಗಿದೆ. ಮೊದಲಿನ ಮೂರು ಸಾಲುಗಳು ಒಂದು ಓಟದಿಂದ ಕೂಡಿಕೊಂಡು ಜಕಾರ ಅಂತ್ಯಪ್ರಾಸವಾಗಿದ್ದರೆ ಮುಂದಿನ ಮೂರು ಸಾಲುಗಳು ಇನ್ನೊಂದು ಓಟದಿಂದ ಕೂಡಿಕೊಂಡಿದ್ದು ಡಕಾರ ಅಂತ್ಯಪ್ರಾಸವಾಗಿದೆ. ಏಳು ಮತ್ತು ಎಂಟನೆಯ ಸಾಲುಗಳಲ್ಲಿ ಇವನ್ನು ಕಾಣಲಾಗುವುದಿಲ್ಲ. ಮತ್ತೆ ಕೊನೆಯ ಎರಡು ಸಾಲುಗಳಲ್ಲಿಯ ಲಯ, ಅಂತ್ಯಪ್ರಾಸ ಹೊಂದಿಕೆಯಾಗುತ್ತದೆ.

ಈಗ ಕಾಜಿನ ಗುಂಡುಗಳನ್ನು ಪೇಟೆಯಲ್ಲಿ ಕೊಂಡುಕೊಳ್ಳಬಹುದು. ಹಿಂದೆ ಇಂತಹ ಸೌಲಭ್ಯವಿರಲಿಲ್ಲ. ಅವರು ಕಲ್ಲು ಕಟೆದು ಗುಂಡುಗಳನ್ನು ಮಾಡಿಕೊಳ್ಳಬೇಕಾಗುತ್ತಿತ್ತು. ಇದು ಪ್ರಯಾಸದ ಕೆಲಸ. ಹುಡುಗರು ಕೂಡಿಕೊಂಡು ಬೇಸರಿಕೆಯನ್ನು ಕಳೆಯುವ ಸಲುವಾಗಿ ನಡು ನಡುವೆ ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಿದ್ದರು. ಅದು ಪದ್ಯವಾಗಿಯೋ ಹೊರಬರುತ್ತಿತ್ತು.

ಕಲ್ಲ ಕಾಟಿ ಕಾಟ ।
ಮುಳ್ಳ ಮುರಿ ಮುರಿ ।
ತಾಂಬಾಕ್ ತಯ್ ತಯ್ ।
ವಾಡ್ಡರ ಮುಕಳಿ ಫುಂಯ್ ಫುಂಯ್ ॥

ಎಂದು. ಹೀಗೆಂದಾಗ ನಗೆ ಬರುವುದು ಸ್ವಾಭಾವಿಕ. ಎಲ್ಲರು ನಕ್ಕು ಮತ್ತೆ ತಮ್ಮ ಕಟೆಯುವ ಕೆಲಸಕ್ಕೆ ತೊಡಗುತ್ತಿದ್ದರು.

೨) ಚಿಣಿಪಣಿಯಾಟ —

ಚಿಣಿಪಣಿಯಲ್ಲಿಯೂ ಅನೇಕ ವಿಧಗಳು 'ಏಕಾಃಪಾಃವ' ಎಂದು ಪ್ರಾರಂಭಿಸುವುದು ಅವುಗಳಲ್ಲಿ ಒಂದು. ಇದಕ್ಕೆ 'ಊ' ಎನ್ನುವ ಆಟವೆಂತಲೂ ಕರೆಯುತ್ತಾರೆ. ಇದರಲ್ಲಿಯೂ ಮಿಕ್ಕ ವುಗಳಂತೆ ಎರಡು ಗುಂಪುಗಳಾಗುತ್ತವೆ. ಆದರೆ ಇಲ್ಲಿ 'ಹಿರಿಗಡ ತಿ'ಯ ಆವಶ್ಯಕತೆಯಿಲ್ಲ. ಕೆಲವೊಮ್ಮೆ ಹುಡ್ಗರಿಗಳನ್ನು ಆರಿಸಿ ಕೊಳ್ಳುವ ಸಲುವಾಗಿಯೋ ಅಥವಾ ತಮ್ಮ ವರ್ಚಸ್ಸಿನಿಂದ ತಾವೇ ಹಿರಿಗಡತಿಯಾಗಿಯೋ ಆಟವನ್ನು ನಡಿಸುವುದುಂಟು. ಒಂದು ನಿರ್ದಿಷ್ಟ ಸಂಖ್ಯೆಯಲ್ಲಿ 'ಜಿಲ್ಲು'ಗಳನ್ನು (ಜುಲ್ಲಾ) ನಿರ್ಧ ರಿಸುತ್ತಾರೆ. 'ಮಳೆ-ಬಿಸಿಲು' (Toss) ಕೇಃಳಿ ಯಾರು ಗೆದೆ ಯುತ್ತಾರೆಯೋ ಅವರು ಆಡಲು ತೊಡಗುತ್ತಾರೆ. ಇನ್ನೊಂದು ಪಂಗಡದವರು ಹಿಡಿಯಲು ಹೋಗುತ್ತಾರೆ. ಸಣ್ಣವರಿಂದ ಆಟ ಪ್ರಾರಂಭವಾಗುತ್ತದೆ. ಪುಚ್ಚಿಯೊಳಗಿಂದ (ಹರಿ) ಚಿಣಿಯನ್ನು ದಾಂಡಿನಿಂದ ಚೀಃಕುತ್ತಾರೆ. ಅದನ್ನು ಎದುರಿಗಿದ್ದವರು ಹಿಡಿ ಯಲು ಪ್ರಯತ್ನಿಸುತ್ತಾರೆ. ಹಿಡಿದರೆ ಅವರಿಗೆ ಒಂದು 'ಕಾಃಚಿ'ಯ ಆಟ ಬರುತ್ತದೆ. ಆಡುವವನ ಆಟ ಮುಗಿಯುತ್ತದೆ. ಒಂದ್ವೊ ವೇಳೆ ಅದರೊಳಗಿಂದ ಪಾರಾದರೆ 'ಗೂಟಾ' (ಗುಟ್ಟಾ) ಹೊಡೆಯುತ್ತಾರೆ. ಹಿಡಿಯುವವರು ಚಿಣಿಯನ್ನು ಒಗೆಯಲಾ

ಅದನ್ನು ತಿರುಗಿ ದಾಂಡಿನಿಂದ ಹೊಡೆಯಲು ಪ್ರಯತ್ನಿಸು ತ್ತಾರೆ. ಎಲ್ಲಿ ಬೀಳುತ್ತದೆಯೊ ಅಲ್ಲಿಂದಲೆ ಎಣಿಕೆಗೆ ಪ್ರಾರಂಭ ವಾಗುತ್ತದೆ. ಪ್ರತಿಯೊಂದು ಎಣಿಕೆಗೂ ಒಂದೊಂದು ರೀತಿಯ

ಏಕಾಪಾವಾ ಏನ ಪಾರ್ತಿ ಕೆಳಗಡಿ ಓಣ್ಯಾಗ।
ಜೋಕಾಜಿಟ್ಟೆ ಜೋಲಿ ಹ್ಯಾಡಪತಿ ಜಮುಖಂಡಿ ಪ್ಯಾಟ್ಯಾಗ।
ಮುರಕಾಮುಟ್ಟೆ ಮುರಕೊಂಡ ಬಿದ್ದತಿ ಕಲ್ಲೊಳ್ಳಿ ಗುಡ್ಡಾಗ।
ಚಾರಿಕ್ಯಾನ ಗೋಡಾ ಚಾಂಪಿ ಹಾಸೇತಿ ಚ್ಯಾಂಜಿ ಹೊತ್ನ್ಯಾಗ।
ಪದಕಾ ಪುಚ್ಚಿ ಪಾಗಡಿ ಆಡೇತಿ ಸರವತ್ತ ರಾತ್ರ್ಯಾಗ।
ಸೇಕುಂಡೊಳ್ಳಾ ಸೇದತೇತಿ ರೊಟ್ಟಿತಾಟ್ಯಾಗ।
ಜಿಲ್ಲಕ ಜಿಲ್ಲಾ ಟಾಂಗಾ ಹೊಡವತಿ ಯರಗಟ್ಟಿ ಹಾಳ್ಯದಾಗ। *

ಇಲ್ಲಿಗೆ ಒಂದು 'ಜಿಲ್ಲು' ಮುಗಿಯುತ್ತದೆ. ಇಲ್ಲಿ ಬಂದಿರುವ 'ಏಕಾಪಾವ, ಜೋಕಾಜಿಟ್ಟಿ, ಮುರಕಾ ಮುಟ್ಟಿ, ಚಾರಿಕ್ಯಾನ ಗೋಡಾ, ಪದಕಾ ಪುಚ್ಚಿ, ಸೇಕುಂ ಡೊಳ್ಳಾ, ಜಿಲ್ಲ ಇವುಗಳಿಗೆ ಸಂಖ್ಯಾನಿರ್ದೇಶ ವಿರಬೇಕೆಂದು ಭಾಸವಾಗುತ್ತದೆ. ಏಕಾಪಾವ ದಲ್ಲಿ ಏಕ, ಮುರಕಾಮುಟ್ಟಿಯಲ್ಲಿ ಮೂರು, ಚಾರಿಕ್ಯಾನ ಗೋಡಾ ದಲ್ಲಿ ಚಾರ, ಸೇಕುಂಡೊಳ್ಳದಲ್ಲಿ ಛೇ, ಇವು ಇರಬಹುದೆಂದು ಮೇಲ್ನೋಟದಿಂದಲೆ ಹೊಳೆಯುತ್ತದೆ. ಜೋಕಾಜಿಟ್ಟಿಯಲ್ಲಿ ದೋ, ಪದಕಾಪುಚ್ಚಿಯಲ್ಲಿ ಪಾಚ, ಇವು ಇದ್ದಿರಬಹುದೆಂದು ತರ್ಕಿಸಲಿಕ್ಕೆ ಕೆಲವೆಡೆ ದೋಕಾಚಿಟ್ಟಿ, ಪಚಕನ ಪುಚ್ಚಿ ಎಂಬ ರೂಢಿಯಿದ್ದುದು ಆಧಾರವಾಗುತ್ತದೆ. ಮತ್ತು ಇವೆಲ್ಲವುಗಳು

---

*ದೋಕಾ ಚಿಟ್ಟಿ, ತಿರಕನ ಮುಟ್ಟಿ, ಪಚಕನ ಪುಚ್ಚಿ, ಸೇಮುಂಡೊಳ್ಳ ಎಂದು ಪಾಠಾಂತರಗಳೂ ಉಂಟು.

ಕೂಡುನುಡಿಗಳಾಗಿವೆ. ಅಂತೆಯೆ ಅವಸರವಸರವಾಗಿ ಎಣಿಸು ವಾಗ ಪಾಂವ, ಚಿಟ್ಟಿ, ಮುಟ್ಟಿ, ಗೋಡಾ, ಪೂಕ, ಡೋಳಾ, ಜಿಲ್ಲ ಎನ್ನುವುದುಂಟು. ಆಡುವಿಕೆಯ ವಿಧಾನದ ಮೇಲಿಂದಲೆ ಈ ಹೆಸರುಗಳು ಬಂದಿರಬಹುದೆಂದು ತರ್ಕಿಸಲವಕಾಶವಿದೆ. ಏಕೆಂದರೆ, ಪಾಂವ-ಪಾಂವ ಎಂದರೆ ಕಾಲು. ಇದನ್ನು ಚಿಣಿ ಯನ್ನು ಕಾಲಮೇಲೆ ಇಟ್ಟುಕೊಂಡೆ ಹೊಡೆಯಲಾಗುತ್ತದೆ. ಚಿಟ್ಟಿ ಬಹುತರವಾಗಿ ಚಿಣಿಗೆ ಇದು ಪರ್ಯಾಯ ಶಬ್ದವಿರಬೇಕು. ಇಲ್ಲಿ ಹೊಡೆಯುವಾಗ ಚಿಣಿಯನ್ನು ತಿರುಗಿಸಲಾಗುತ್ತದೆ. ಮುಟ್ಟಿ-ಮುಟ್ಟಿಗೆ, ಇದನ್ನು ಮುಟ್ಟಿಗೆಯ ಮೇಲೆ ಚಿಣಿಯ ನ್ನಿಟ್ಟು ಹೊಡೆದರೆ, ಗೋಡಾ-ಕುದುರೆ, ಇದನ್ನು ಎಡಗೈ ಯನ್ನು ಡಬ್ಬು ಹಿಡಿದು ನಡುವಿನ ಎರಡು ಬೆರಳುಗಳನ್ನು ಮಡಚಿ ದಂಡೆಯ ಎರಡು ಬೆರಳುಗಳನ್ನು ಮುಂದೆ ಚಾಚಿ ಕುದು ರೆಯ ಮುಖದಾಕಾರವನ್ನಾಗಿ ಮಾಡಿ ಅಲ್ಲಿ ಚಿಣಿಯನ್ನಿಟ್ಟು ಹೊಡೆಯಲಾಗುತ್ತದೆ. ಪುಚ್ಚಿ-ಇದನ್ನು ಎಡಗೈಯನ್ನು ಓರೆ ಯಾಗಿ ಹಿಡಿದು ದರ್ಶಕ ಬೆರಳು ಮತ್ತು ಹೆಬ್ಬೆರಳನ್ನು ಕೂಡಿಸಿ ಪುಚ್ಚಿಯಂತೆ ಮಾಡಿ ಅದರ ಮೇಲೆ ಚಿಣಿಯನ್ನಿರಿಸಲಾಗುವುದು. ಡೋಳಾ-ಕಣ್ಣು. ಇಲ್ಲಿ ಕಣ್ಣಿನ ಮೇಲೆಯೇ ಚಿಣಿಯನ್ನಿಟ್ಟು ಹೊಡೆ ಯುವರು. ಇನ್ನು 'ಜಿಲ್ಲ' ಎನ್ನುವುದಕ್ಕೆ ಯಾವ ಸಂಕೇತವಿ ದೆಯೊ ಗೊತ್ತಾಗುವುದಿಲ್ಲ.

ಆಟವನ್ನಾಡುತ್ತಿದ್ದಂತೆ ಎದುರಾಳಿಗೆ ಅಪಯಶವಾಗ ಲೆಂದು ಒಮ್ಮೊಮ್ಮೆ ಹೀಗೆ ನುಡಿಯುವುದುಂಟು.

ಕಾಲಮುರಿಲ್ಯೊ ಕಂಬಿಕಟ್ಟಲ್ಯೊ
ಬಾಂವಾ ಬಂದ ಎಣ್ಣಿ ಹಚ್ಚಲ್ಯೊ ॥

ಎಂದು ಕಾಲಮೇಲಿಟ್ಟು ಆಡುವ ಏಕಾಂಪಾಂವಕ್ಕೆ ಹೇಳಿದರೆ.

ಕಣ್ಣ ಗುಡ್ಡಿ ಕಾಂಗಿ ಹರೀಲ್ಯೊ

ಎಂದು ಸೇಕುಂಡೊಳ್ಳಕ್ಕೆ ಅನ್ನುವುದುಂಟು. ಇವೆಲ್ಲ ಈರ್ಷ್ಯೆಗೆ ಕಾರಣವಾಗದೆ ಅಲ್ಲಿಯೆ ಆಡಿ–ಹಾಡಿ–ನಲಿದು ಮರಳುವುದರಲ್ಲಿಯೇ ಪರ್ಯವಸಾನ ಪಡೆಯುತ್ತವೆ.

ಇಲ್ಲಿ ಇನ್ನೊಂದು ಲಕ್ಷ್ಯವಹಿಸಬಹುದಾದ ಸಂಗತಿಯೆಂದರೆ ಶಬ್ದಗಳ ಬಳಕೆ. ಅಂಕಿಗಳಲ್ಲಿಯಾಗಲಿ, ಅವುಗಳಿಗೆ ಹೊಂದಿಕೊಂಡ ಶಬ್ದಗಳಲ್ಲಿಯಾಗಲಿ ಕೇವಲ ಕನ್ನಡ ಶಬ್ದಗಳನ್ನು ಕಾಣದೆ ಉರ್ದು, ಮರಾಠಿಗಳನ್ನು ಕಾಣುತ್ತೇವೆ. ಬಹುತರವಾಗಿ ವಿಜಾಪೂರ ಶಾಹಿಯ ಆಳಿಕೆಯಲ್ಲಿ ಉರ್ದು ಶಬ್ದಗಳ ಸೇರ್ಪಡೆಯಾಗಿರಬೇಕು. ಮತ್ತು ಪೇಶ್ವೆಯವರ ಆಳಿಕೆಯಲ್ಲಿ ಮರಾಠಿ ಶಬ್ದಗಳು ಬಂದು ಸೇರಿರಬೇಕು. ಇಂದು ಭಾಷಾವಾರ ಪ್ರಾಂತ ರಚನೆಯಾಗಿರುವುದರಿಂದ ಒಂದು ಭಾಷೆಯವರು ಇನ್ನೊಂದು ಭಾಷೆಯವರನ್ನು ಬೇರೆದೃಷ್ಟಿಯಿಂದ ನೋಡುವ ಪ್ರಸಂಗ ಬಂದಿದೆಯಾದರೂ ಅಂದು ಇಂತಹ ಯಾವ ಭಾವನೆಗೂ ಅವರಲ್ಲಿ ಅವಕಾಶವಿರಲಿಲ್ಲ. ಆ ಶಬ್ದಗಳಿಂದ ಅವರಿಗೆ ಅರ್ಥವಾಗಲಿ ಆಗದಿರಲಿ ನಿತ್ಯ ರೂಢಿಯಲ್ಲಿದ್ದುದರಿಂದ ಅವುಗಳನ್ನು ಬಳಸಿ ಆಟವಾಡುತ್ತಿದ್ದರು. ಇಂದಿಗೂ ಜಾನಪದದಲ್ಲಿ ಇದೇ ನಡೆದುಕೊಂಡು ಬಂದಿದೆ.

೩) ಕುದುರೆಯ ಆಟ —

ಈ ಭಾಷಾ ಬಾಂಧವ್ಯ ಇದಕ್ಕೂ ಮುಂದೆ ಹೋಗಿ

ಎಷ್ಟೋ ಕಡೆಗೆ ಕೇವಲ ಉರ್ದು ಪದ್ಯಗಳನ್ನೇ ಹಾಡಿ ಆಡುವುದುಂಟು.

ನಿಕಲಕ ಟಾಂಗ್ ಟೂವರ್ ।
ಗೋಡಾ ಹಾವಾರಾ । ತಟು ತುವಾರಾ ।
ಕಿತಿ ಕಿತಿ ಬೋಲ್ । ಬೋಲ್ ಬಚ್ಚಾ ಬೋಲ್ ।
ಬೋಲ್ ತುಮೆ ಬೋಲ್ । ತೆರೆ ನಕ್ಕಡವಿನ್ನಿ
ಬೋಲ್ ॥

ಎಂಬ ಪದವನ್ನು ಪ್ರಯೋಗಿಸಿ ಕುದುರೆಯ ಆಟವನ್ನಾಡುತ್ತಾರೆ. ಒಬ್ಬನು ಕುದುರೆಯಾಗಿ ಡೊಗ್ಗುತ್ತಾನೆ, ಇನ್ನೊಬ್ಬನು ಅವನ ಮೇಲೆ ಕುಳಿತು ಕಣ್ಣು ಮುಚ್ಚುತ್ತಾನೆ. ಆಗ ಈ ಹಾಡನ್ನು ಹಾಡುತ್ತಾನೆ. ಆ ಮೇಲೆ ತನ್ನ ಇನ್ನೊಂದು ಕೈಯಿಂದ ಬೆರಳು ಮಾಡುತ್ತಾನೆ. ಕಣ್ಣು ಮುಚ್ಚಿಕೊಂಡು ಕುದುರೆಯಾದವನು ಆ ಬೆರಳಿನ ಸಂಖ್ಯೆಯನ್ನು ಹೇಳಬೇಕು. ಒಂದು ವೇಳೆ ಸರಿಯಾದ ಅಂಕಿಯನ್ನು ಹೇಳಿದರೆ ಅವನು ಪಾರಾದಂತೆ. ಮೇಲೆ ಕುಳಿತವನು ಆ ಮೇಲೆ ಕುದುರೆಯಾಗಬೇಕಾಗುತ್ತದೆ.

ಹೆಣ್ಣು ಮಕ್ಕಳ ಆಟಗಳು*

A boy is a boy; but a girl is a woman. ಈ ಮಾತಿನ ಸತ್ಯತೆಯನ್ನು ಹೆಣ್ಣು ಮಕ್ಕಳ ಆಟವಲ್ಲಿಯೇ

*ಡಾ. ಬಿ. ಎಸ್. ಗದ್ದಗಿಮಠ ಅವರ 'ಕನ್ನಡ ಜಾನಪದ ಗೀತೆಗಳು' ಇದರಲ್ಲಿ ಈ ಆಟಗಳು ವಿಶೇಷವಾಗಿ ಬಂದುದರಿಂದ ಇಲ್ಲಿ ಮೊಟಕುಗೊಳಿಸಲಾಗಿದೆ.

ಕಾಣುತ್ತೇವೆ. ಗುಂಪುಗೂಡಿಕೊಂಡು ಆಡುವುದಕ್ಕೆ ಪ್ರಾರಂಭಿಸಿದರೆ ಅವರು ಒಂದು ಕುಟುಂಬದವರೇ ಆಗುತ್ತಾರೆ. ಗೊಂಬೆಗಳಿಗೆ ಹೆಣ್ಣು-ಗಂಡಿನ ಅರಿವೆಗಳನ್ನು ಹಾಕಿ ಮದುವೆ ಮಾಡಿಯೋ ನಿತ್ಯದ ವ್ಯವಹಾರದಲ್ಲಿ ತೊಡಗಿಕೊಂಡೋ ಆಡುತ್ತಾರೆ. ಇದ್ದ ಸಾಮಾನುಗಳನ್ನೇ ನಿತ್ಯೋಪಯೋಗಿವಸ್ತುಗಳನ್ನಾಗಿಸಿಕೊಳ್ಳುತ್ತಾರೆ.

೧) ಕುಂಬಳಕಾಯಿ ಆಟ —

ಇದು ಒಂದು ಗುಂಪಿನ ಆಟ. ಕಂಬವನ್ನೋ ದನಗಳನ್ನೋ ಕಟ್ಟುವ ಗೂಟವನ್ನೋ ಆಶ್ರಯಿಸಿ ಈ ಆಟ ನಡೆಯುತ್ತದೆ. ಹಿರಿಯಳಾದವಳೊಬ್ಬಳು ಗೂಟವನ್ನು ಹಿಡಿದುಕೊಂಡು ಮುಂದೆ ಕೂಡ್ರುವಳು. ಕ್ರಮೇಣ ಸಣ್ಣವರು ಅವಳ ಟೊಂಕವನ್ನು ಹಿಡಿದುಕೊಳ್ಳುವರು. ಆ ಮೇಲೆ ಒಬ್ಬಾಕೆ :—

ನೀರಡಿಸಿ ಬಾಂದಿನವ್ವಾ । ನಿಲಲ್ದ ಕಾಯಿ ತಿಂದಿನವ್ವಾ ।

ಎಂದು ಅನ್ನುತ್ತ ಆ ರೈಲುಡಬ್ಬಿಯ ಸಾಲಿನಂತಿರುವ ಆ ಳ್ಳಿಯನ್ನು ಸುತ್ತುವಳು. ಆ ಮೇಲೆ ಮುಂದಿನವಳನ್ನು ಕೇಳುವಳು. ಅವಳು ಆಗ ಅತ್ತೆಯ ಸ್ವರೂಪದವಳು. ಅವರಿಬ್ಬರಲ್ಲಿ ಸಂವಾದ ನಡೆಯುತ್ತದೆ.

ಆಕೆ- ಅತ್ತಿ ಅತ್ತಿ ಸರಸೊತ್ತಿ ।
ಅತ್ತೆ-ಏನಬೇಕ ಉತ್ರೊತ್ತಿ ।
ಆಕೆ- ಆ ನಾಡ ತಿರಗಿ । ಈ ನಾಡ ತಿರಗಿ ।
ಹಸದ ಬಾಂದ ನಿ ।
ಅತ್ತಿ ಅತ್ತಿ ಕುಂಬಳ ಕಾಯಿ ಕೊಡ ।

ಆಕೆ ಅತ್ತೆಗೆ ಕುಂಬಳಕಾಯಿ ಬೇಡುವಳು. ಅತ್ತೆ ಅನಿಸಿಕೊಂಡ ಮೇಲೆ ಆ ರೀತಿಯಲ್ಲಿಯೇ ತನ್ನ ವ್ಯವಹಾರವನ್ನು ನಡೆಸ ಬೇಕಲ್ಲವೆ ? ಕುಂಬಳ ಬೀಜ ಹಾಕುವವನನ್ನು ಮೊದಲುಮಾಡಿ ಹೂ, ಮಿಡಿಯಿಂದ ಹಣ್ಣಾಗುವವರೆಗೆ ಮುಂದುವರಿಸುತ್ತಾಳೆ. ಅವಳನ್ನು ಹಲವು ಬಾರಿ ಸುತ್ತಿ ಬರುವಂತೆ ಮಾಡುತ್ತಾಳೆ. ಕೊನೆಗೆ ಒಂದು ಕಾಯಿಯನ್ನು ಹರಿದುಕೊಳ್ಳಲು ಅನುಮತಿ-ಯನ್ನೀಯುತ್ತಾಳೆ. ಆಕೆ ಹಿಂದಿನ ಒಬ್ಬಾಕೆಯನ್ನು ಜಗ್ಗಿ ಬಳ್ಳಿಯಿಂದ ಬಿಡಿಸಿಕೊಳ್ಳುತ್ತಾಳೆ. ಹೀಗೆಯೆ, ಆ ಬಳ್ಳಿಯಲ್ಲಿಯ ಎಲ್ಲ ಕಾಯಿಗಳು ಮುಗಿಯುವವರೆಗೆ ಆಟ ನಡೆಯುತ್ತದೆ. ಪ್ರಪಂಚವು ಹೀಗೆಯೇ ಇದೆ. ಒಂದು ಕುಂಬಳಕಾಯಿಯ ಸಲುವಾಗಿ ಎಷ್ಟು ಸುತ್ತು ತಿರುಗಬೇಕು ! ಅತ್ತೆಯ ಅಧಿಕಾರವನ್ನು ಎಷ್ಟು ಸಹಿಸಿ ಕೊಂಡುಹೋಗಬೇಕು! ಕುಂಬಳಕಾಯಿ ಸಿಗುವವರೆಗೆ ಎಷ್ಟೊಂದು ತಾಳ್ಮೆಯನ್ನು ವಹಿಸಬೇಕು! ಇಲ್ಲದಿದ್ದರೆ ಅದು ದೊರೆಯ ಲಾರದು. ಬೇಕೆಂದ ಮೇಲೆ ದೊರೆಯುವವರೆಗೆ ಹೋರಾಟ ನಡೆಯಲೇ ಬೇಕು.

೨) ಪುಗಡಿ ಆಟ —

ಓರಗೆಯ ಗೆಳತಿಯರಿಬ್ಬರು ಕೈಗಳನ್ನು ಕತ್ತರಿಯ ಮೇಲಿಂದ ಹಿಡಿದು ಕಾಲಿನ ತುದಿಗಳನ್ನು ಕೂಡುವಂತೆ ಸಮೀಪ ವಾಗಿರಿಸಿ ದುಂಡಗೆ ಪರಸ್ಪರರನ್ನು ಆಧರಿಸಿ, ಜೋಲಿಯನ್ನು ಹಿಡಿದು, ತಿರುಗುತ್ತಾರೆ. ಯಾವುದೂ ತನ್ನಷ್ಟಕ್ಕೆ ತಾನು

ನಡೆಯಲಾರದು. ಇನ್ನೊಂದರ ಆಧಾರ ಬೇಕೇ ಬೇಕು. ಕೈ ಕುಲುಕಿಸಿ, ಆ ವೇಗದಲ್ಲಿಯೇ ಗತ್ತಿಗನುಸರಿಸಿ,

ಬಾರೆಕ್ಕೋಲ ಚಿಗಿ ಚಿಗಿ ।
ಚಂಡು ಹೂವ್ವಾ ಚಿಗಿ ಚಿಗಿ ।

ಎಂದು ಒಬ್ಬೊಬ್ಬರು ಒಂದೊಂದು ಸಾಲನ್ನು ಅನ್ನುತ್ತ ತಮಗೆ ಬೇಸರ ಬರುವವರೆಗೆ ಇಂತಹ ಅನೇಕ ಜೋಡಿಯ ಸಾಲುಗಳನ್ನು ಹೇಳುತ್ತ ಆಡುವರು.

ಇದೇ ಮಾದರಿಯ ಹಾಡುಗಳನ್ನು ಹೇಳುತ್ತ ಜೋಡಿಯಾಗಿ ದುಂಡಗೆ ನಿಧಾನವಾಗಿ ತಿರುಗುವ ಇನ್ನೊಂದು ಆಟವಿದೆ. ಪುಗಡಿಯಲ್ಲಿ ಕೈಗಳನ್ನು ಸೆಟಸಿ ಹಿಡಿದುಕೊಂಡರೆ ಇಲ್ಲಿ ಅವರ ಕುತ್ತಿಗೆಯ ಮೇಲೆ ಇವರದು, ಇವರ ಕುತ್ತಿಗೆಯ ಮೇಲೆ ಅವರದು ಇದ್ದು ಮುಖಗಳು ವಿರುದ್ಧ ದಿಕ್ಕಿನಲ್ಲಿರುತ್ತವೆ. ಪುಗಡಿಯಲ್ಲಿ ವೇಗವಿದ್ದರೆ ಇಲ್ಲಿ ನಿಧಾನತೆಯಿದೆ. ಇದಕ್ಕೆ ಕೆಲವು ಜೋಡಿಗಳನ್ನು ಕೊಡಬಹುದು.

೧) ಅಡಕಲ ಗಡಿಗ್ಯಾಗಾಡಗುನು ಬಾ ।
ನಿಬ್ಬಣ ಬಾಂದತಿ ನೋಡುನು ಬಾ ।

೨) ಗ್ವಾಡಿ ಮ್ಯಾಲ ಗ್ವಾಂಬ ।
ಆಕಿ ನಾಮ್ಮ ತಂಗಿ ॥

೩) ಮೋಳಗಿ ಮ್ಯಾಲ ಹಾಪ್ಸಳಾ ।
ಗಾಂಡಾ ಹೇಣ್ತೆ ಸಪ್ಸಳಾ ॥

ಹೀಗೆ ನಡು-ನಡುವೆ ಹಾಸ್ಯದ ಚಟಾಕಿಗಳಿಂದ ಕೂಡಿದ ಹಾಡುಗಳನ್ನು ಹಾಡುತ್ತ ಎಷ್ಟೋ ಹೊತ್ತು ಕಳೆಯುವರು.

೩) ಸೇದೂ ಬಾಂವಿ

ಹಿರಿಯವಳೊಬ್ಬಳು ತನ ಒಂದು ಕಾಲನ್ನು ಮೇಲಕ್ಕೆ ಗೋಡೆಗೆ ಹಚ್ಚುವಳು. ಇನ್ನುಳಿದವರು ಆಕೆಯ ಕಾಲ ಮೇಲೆ ತಮ್ಮ ಕಾಲನ್ನಿರಿಸುವರು. ಆಮೇಲೆ,

ಸೇದೂ ಬಾಂವಿ । ಸೆಟಕಾರ ಬಾಂವಿ ।
ನಾವಪ್ಪಾಪ್ಸ ಕಟ್ಟಿಸ್ಯಾನ । ಗಂಚಿನ ಬಾಂವಿ ।
ಸೇದಲ್ಹೋ ಬ್ಯಾಡೊ ಡುಂ ಡುಮುಕ್ ॥

ಎಂದು ಹಾಡುತ್ತ ನೀರಲ್ಲಿ ಕೊಡವನ್ನು ಬಿಡುವ ನಟನೆಯನ್ನು ಮಾಡುವರು. ಕೊಡ ನೀರಲ್ಲಿ ಹರಿದುಕೊಂಡೆ ಬೀಳುವುದು. ಅದರಂತೆ ನತ್ತು, ಬುಗುಡಿ ಮುಂತಾದ ವಸ್ತುಗಳೂ ಬೀಳುವವು. ಅತ್ತೆಯನ್ನು ಕೇಳಿಕೊಂಡು ಎಲ್ಲರೂ ಬಾವಿಯಲ್ಲಿ ಇಳಿಯುವರು. ಅವುಗಳನ್ನು ತರುವ ಸಲುವಾಗಿ. ಹೀಗೆ ಎಲ್ಲರೂ ಬಾವಿಯಲ್ಲಿ ಇಳಿಯಲು ಹಿಂದಿನ ಕಾಲುಗಳು ತೊಡಕಿಕೊಂಡು ಒಂದು ರೀತಿಯ ಜಾಳಿಗೆಯಾಗುವುದು. ಆಗ ಎಲ್ಲರೂ ಹೊರಗಡೆಯಲ್ಲಿ ಜಗ್ಗ ತೊಡಗುವರು, ಆಟ ಮುಗಿಯುವದು.

ಹಬ್ಬಗಳು

ಹಬ್ಬಗಳಲ್ಲಿ ವೈವಿಧ್ಯವಿರುವಂತೆ ಅವುಗಳಿಗೆ ಸಂಬಂಧಿಸಿದ ಆಟ ಪಾಟಗಳಲ್ಲಿಯೂ ವೈವಿಧ್ಯತೆ ಕಂಡುಬರುತ್ತದೆ. ಗಂಡು ಮಕ್ಕಳು ಆಡುವ ರೀತಿ ಒಂದು ತೆರನಾದರೆ ಹೆಣ್ಣುಮಕ್ಕಳ ರೀತಿಯು ಬೇರೆಯದು. ಹೀಗಾಗಿ ಹಬ್ಬದ ಸಿಹಿ ಸಿಹಿ ಭಕ್ಷ್ಯ ಭೋಜ್ಯಗಳ ಜೊತೆಗೆ ಇವು ಸೇರಿಕೊಂಡು ಮಕ್ಕಳನ್ನು ಆನಂದ ಸಾಗರದಲ್ಲಿ ಓಲಾಡಿಸುತ್ತವೆ.

ಗಂಡುಮಕ್ಕಳ ಹಬ್ಬಗಳು

ಗಂಡುಮಕ್ಕಳು ಹಾಡಿ - ಆಡುವ ಹಬ್ಬಗಳೆಂದರೆ ಎರಡು. ಒಂದು ದೀಪಾವಳಿ, ಇನ್ನೊಂದು ವರ್ಷದ ಕೊನೆಯ ದಾದ ಹಬ್ಬ ಹೋಳೀಹುಣ್ಣಿವೆ. ಇನ್ನುಳಿದ ಹಬ್ಬಗಳನ್ನು ಆಚರಿಸುವುದಿಲ್ಲವೆಂದಲ್ಲ; ಹೊಸ-ಹೊಸ ಬಟ್ಟೆ-ಬರೆಗಳನ್ನು ಹಾಕಿಕೊಂಡು ಸುಗ್ರಾಸ ಭೋಜನವನ್ನುಂಡು ನಕ್ಕು ನಲಿಯುತ್ತಾರೆ. ಆದರೆ ಹಾಡುತ್ತ ಆಡುವವು ಇವೆರಡು ಮಾತ್ರ.

೧) ದೀಪಾವಳಿ— ದೀಪಾವಳಿಯ ಆರತಿ ಬೆಳಗಿಸಿಕೊಂಡು ಮಳೆಗಾಲ ಕೊನೆಗೊಳ್ಳುತ್ತದೆ. ಮುಂದೆ ಮಳೆಯಾದರೂ ಕ್ವಚಿತ್ತಾಗಿ. ಈ ವರೆಗೆ ಎಲ್ಲೆಡೆಗೆ ಮಳೆ ಸುರಿದು ಒಂದು ರೀತಿಯಲ್ಲಿ ಹವಾಮಾನದಲ್ಲಿ ವೈಪರೀತ್ಯವಿರುತ್ತದೆ. ಅಲ್ಲದೆ ಮಳೆಗಾಲ ಮುಗಿದು ಚಳಿಗಾಲ ಪ್ರಾರಂಭವಾಗುವ ಸಂಧಿಕಾಲ. ಹೀಗಾಗಿ ರೋಗ-ರುಜಿನಗಳು ಹೆಚ್ಚು. ಒಕ್ಕಲಿಗರಿಗೆ,

ದನಗಾಯುವ ಹುಡುಗರಿಗೆ ತಮ್ಮ ದನಕರುಗಳ ಯೋಗಕ್ಷೇಮವೆ ಮುಖ್ಯ. ಅವು ಆರೋಗ್ಯದಿಂದ ಇದ್ದರೆ ಇವರಿಗೆ ಸಂತೋಷ. ಅದಕ್ಕಾಗಿ, ಅನೇಕ ದೇವರಿಗೆ ಬೇಡಿಕೊಳ್ಳುತ್ತಾರೆ. ತಮ್ಮ ದನಕರುಗಳಿಗೆ ಯಾವುದೇ ರೀತಿಯ ಬೇನೆ ಬೇಸರಿಕೆಗಳು ಬರದಿರಲೆಂದು ಆರತಿಯನ್ನು ಬೆಳಗುತ್ತಾರೆ

ಆರತಿ ಬೆಳಗುವ ಈ ಪದ್ಧತಿಯು ವಿಜಾಪುರ ಸುತ್ತ-ಮುತ್ತಲೂ ಹೆಚ್ಚು. ಇದಕ್ಕೆ 'ಅಣಿ-ಪೀಣಿ' ಅಥವಾ 'ಅಡಿ-ಪೀಡಿ' ಎಂದು ಕರೆಯುತ್ತಾರೆ.* ಡ ಮತ್ತು ಣ ಗಳು ಅದಲು ಬದಲುಗೊಳ್ಳುವುದುಂಟು. ಆದ್ದರಿಂದ ಅರ್ಥದ ದೃಷ್ಟಿಯಿಂದ ಯಾವ ವ್ಯತ್ಯಾಸವಾಗುವುದಿಲ್ಲವಾದ್ದರಿಂದ ಎರಡೂ ಸರಿಯಾದವುಗಳೆ. ಒಂದೊಂದು ಕಡೆಗೆ ಒಂದೊಂದು ಪ್ರಯೋಗಗಳು ರೂಢಿಯಲ್ಲಿವೆ.

ಸಾಮಾನ್ಯವಾಗಿ ಆರತಿ ಬೆಳಗುವುದು ದೀಪಾವಳಿಯ ಚತುರ್ದಶಿಯಿಂದ ಪ್ರಾರಂಭವಾಗಿ ಮೂರು ದಿವಸ ಅಂದರೆ ಪ್ರತಿಪದೆಯವರೆಗೆ ದನಗಾಯುವ ಹುಡುಗರು ತಮಗೆ ಅನುಕೂಲವಾಗುವಂತೆ ಊರಲ್ಲಿ ಕೆಲವು ಗುಂಪುಗಳನ್ನು ಮಾಡಿಕೊಳ್ಳುತ್ತಾರೆ. ಆಯಾ ಗುಂಪಿನವರು ತಮ್ಮ ಗುಂಪಿನಲ್ಲಿ ಬರುವ ದನಗಳಿಗೆ ಆರತಿಮಾಡುತ್ತಾರೆ. ದನಗಳ ಮನೆಯವರ ಕಡೆಯಿಂದ ಖೊಬ್ಬರಿಯ ಬಟ್ಟಲಗಳನ್ನು ಪಡೆಯುತ್ತಾರೆ.

* ಕೆಲವೆಡೆ 'ಅಂಟಿಗೆ ಪಂಟಿಗೆ' ಎನ್ನುತ್ತಾರೆ, 'ಕೆಲವೆಡೆ ಅಂಟಗೆ-ಪಂಟಗೆ' ಎನ್ನುತ್ತಾರೆ.

ಕೆಲವರು ಮೂರು ದಿನವೂ ಕೊಡುತ್ತಿದ್ದರೆ ಇನ್ನುಳಿದವರು ತಮಗೆ ಅನುಕೂಲವಾದ ದಿನ ಕೊಡುತ್ತಾರೆ. ಅಂತೂ ಅದಕ್ಕೆ ಒತ್ತಾಯವಿಲ್ಲ ಸ್ವಸಂತೋಷದಿಂದಲೆ ಇದು ನಡೆಯುತ್ತದೆ. ತಮ್ಮ ದನಕರುಗಳ ಮೇಲಿನ ಪೀಡೆಯು ತೊಲಗಲಿ ಎಂಬುದೇ ಇದಕ್ಕೆ ಕಾರಣ. ಹೀಗೆ ಸಂಗ್ರಹವಾದ ಕೊಬ್ಬರಿಯ ಬಟ್ಟಲುಗಳನ್ನು ಊರ ಹೊರಗಿನ ಹನುಮಂತ ದೇವರ ಗುಡಿಯಲ್ಲಿ ಕುಳಿತು ಎಲ್ಲರು ತಿಂದು ಆರತಿಯನ್ನು ಅಲ್ಲಿಯೆ ವಿಸರ್ಜಿಸುತ್ತಾರೆ. ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ.

ಈ ಆರತಿಯನ್ನು ಮಾಡುವಲ್ಲಿಯೂ ಪೋಟಿಯೆ ಇರುತ್ತದೆ. ಈಗಾಗಲೆ ಮಳೆ ಸಾಕಷ್ಟಾಗಿದ್ದು ಹಳ್ಳ-ಕೊಳ್ಳಗಳಲ್ಲಿ 'ಜೇಕು' ಒಳ್ಳೆ ಹುಲುಸಾಗಿ ಬೆಳೆದಿರುತ್ತದೆ. ಅಂತಹ ಜೇಕನ್ನು ತಂದು, ಹೆಣೆದು, ತಮಗೆ ಅನುಕೂಲವಾಗುವಂತೆ, ಬಂದಂತೆ, ಎಳು ಹೆಡೆಯುವರೆಗೆ ನಾಗರ ಹೆಡೆಗಳನ್ನು ಮಾಡುತ್ತಾರೆ. ಹೆಣೆಯುವುದರಲ್ಲಿ ತಮ್ಮ ಕೌಶಲ್ಯವನ್ನು ತೋರಿಸುತ್ತಾರೆ. ಆ ಹೆಡೆಯಲ್ಲಿ ಮಣ್ಣಿನ ಹಣತಿಯನ್ನು ಇಡುವುದಕ್ಕೆ ಒಂದು ಸ್ಥಳವನ್ನು ಮಾಡಿರುತ್ತಾರೆ. ಪ್ರತಿಮನೆಯವರೂ ಈ ಆರತಿಗೆ ಒಳ್ಳೆಣ್ಣೆಯನ್ನು ಹೊಯ್ಯುತ್ತಾರೆ. ಕೈಯ್ಯಲ್ಲಿ ಇಂತಹ ದೀವಿಗೆಗಳನ್ನು ಹಿಡಿದುಕೊಂಡು ಬರುವ ಹುಡುಗರ ಹಿಂಡನ್ನು ನೋಡಿದರೆ ಒಂದು ರೀತಿಯ ಉತ್ಸಾಹ ಎಲ್ಲೆಡೆಗೂ ತುಂಬಿ-ತುಳುಕುತ್ತಿರುವಂತೆ ತೋರುತ್ತದೆ. ನಿಜವಾಗಿಯೂ 'ದೀಪಗಳ ಆವಳಿ' ಇದೆಂದು ಕಲ್ಪನೆಗೆ ಬರುವಂತೆ ಇರುತ್ತದೆ.

ಸಾಮಾನ್ಯವಾಗಿ ಪ್ರತಿಯೊಂದು ಪ್ರಾಣಿಜಾತಿಯನ್ನು ಕುರಿತು ಬೇರೆ ಬೇರೆಯಾಗಿಯೇ ಹಾಡುವುದುಂಟು. ಒಂದು ಮನೆಯಲ್ಲಿ ಎಲ್ಲ ತರದ ಪ್ರಾಣಿಗಳಿದ್ದರೆ ಆಕಳಿಗೆ ಅಗ್ರಸ್ಥಾನ ದೊರೆಯುತ್ತದೆ. ಆಮೇಲೆ ಉಳಿದವುಗಳ ಸರತಿ.

ಹಾಂಡಾಕಳೊ ಬಾಂಡಾಕಳೊ ।
ಒಳ್ಳೃದವರ ಓಣ್ಯಾಗ ಕುಡಗೋಲೊ । ಕುಡಗೋಲೊ ।
ಉದ್ದುದ್ದ ಕುಡಗೋಲಿಗೆ ಮಾರ್ಮ್ಯಾರ್ ಹುಲ್ಲಾ ।
ಮಾರ್ಮ್ಯಾರ್ ಹುಲ್ಲಿಗೆ ಬುರ್‌ಬುರ್ ಹಾಲಾ ।
ಬುರ್ಬುರ್ ಹಾಲಿಗೆ ಕ್ಯಾನಿ ಕ್ಯಾನಿ ಮೊಸರಾ ।
ಕ್ಯಾನಿ ಕ್ಯಾನಿ ಮೊಸರಿಗ ಕಾಣ್ಣಿ ಕಾಣ್ಣಿ ಬೆಣ್ಣಿ ।
ಕಾಣ್ಣಿ ಕಾಣ್ಣಿ ಬೆಣ್ಣಿಗೆ ಸ್ಯಾರಿ ಸ್ಯಾರಿ ತುಪ್ಪಾ ।
ಆಡಿ–ಪೀಡಿ ಚೀಕೊ ಕೊಬ್ರಿ ಬಾಟ್ಲಾ ಜೀಕೊ ।
ನಾಮ್ಮ ಆಕಳ ಪೀಡಾ ಹೊಳ್ಯಾಚೀಕೊ ॥

ಇಲ್ಲಿ ಸರ್ವಸಾಮಾನ್ಯವಾಗಿ ಆಕಳನ್ನು ವರ್ಣಿಸಲಾಗಿದೆ. ಒಮ್ಮೊಮ್ಮೆ ಇದರಲ್ಲಿಯೆ ನಗೆಯನ್ನು ಬೆರೆಸುವುದುಂಟು. ಜೊತೆಗೆ ಆ ಮನೆಯವರನ್ನು ವ್ಯಂಗ್ಯೋಕ್ತಿಯಿಂದ ನುಡಿಯುವುದುಂಟು.

ಹಾಂಡಾಕಳೊ ಬಾಂಡಾಕಳೊ ।
ಗೌಡರ ಚಿಂಚಾಕಳೋ ।
ಕಲಬುರ್ಗಿ ದಾರ್ಯಾಗ ।
ಕಾಲಮುರಕೊಂಡ ಬಿದ್ದೀತ್ಯೊ ।
ಆಡಿ–ಪೀಡಿ ಚೀಕೊ । ಕೊಬ್ಬರಿ ಬಾಟ್ಲಾ ಜೀಕೊ ।
ನಾಮ್ಮ ಆಕಳ ಪೀಡಾ ಹೊಳ್ಯಾಚೀಕೊ ॥

ಆಕಳಿಗಿಂತ ಗೌಡ' ದೃಷ್ಟಿಪಥದಲ್ಲಿ ಮುಂದಿ ಬರುತ್ತಾರೆ ಇಲ್ಲಿ.

ಎಮ್ಮಿ :

ಟ್ರಿಕ್ ಎಮ್ಮಿ ನಾಗೂರೆಮ್ಮಿ |
ಕಳ್ಳಿ ಸಾಲಾಗ ಹೋದಿ ಹುಲ್ಲ ಮೇಯ್ಕೋತ ಬಂದಿ |
ಕ್ಯಾನಿ ಕ್ಯಾನಿ ಪಾಸರಾ ಕೊಟ್ಟೆ |
ಆಣೆ–ಪೀಣೆ ಚ್ಯಾಣೆಗ್ಯೊ | ಚ್ಯಾಜ್ಜಿರೊಟ್ಟಿ ಗಾಣೆಗೊ |
ನಾಮ್ಮೆಮ್ಮಿ ಪೀಡಾ ಹೊಳ್ಯಾಚೀಕೊ ||

ಎಂದು ಸಾಮಾನ್ಯವಾಗಿ ಹೇಳಿವರೆ,

ಫುರಕ್ ಫುದಿಫುಣೆ | ನಾಗರ ಹ್ಯಾಡಿಫುಣೆ |
ಗ್ಯಾಜ್ಜಿ ಕಟ್ಟಿದೆಮ್ಮಿ | ಗಿಲಗುಡ ತಾವು |
ಯಾವೂರ ಸಾನಕಾ | ಕೋಲೂರ ತಾನಕಾ |
ಕೋಲೂರೆಮ್ಮಿ | ಕ್ಯಾನಿ ಕ್ಯಾನಿ ವಾಸರಾ |
ಹೊಡದೀನಾಪ್ಪಾ |
ಹ್ಯಾಬ್ಬಾಳಟ್ಟಿ ಬಾಂಟಾ | ಬಂದೂಕ ತುಗೊಂದ ಹೊಂಟಾ |
ಎದ್ದ ಮಾಲಾ ನಾಗದಾ | ಗುದ್ದಿಕಿಸಕೊಂಡ ಬಿದ್ದಾ |
ಗೂಟಾ ಹಿಡಕೊಂಡಿದ್ದಾ ||

ಹೀಗೆ ಒಂದೊಂದು ಊರಿನವರನ್ನು ಹೀಯಾಳಿಸಿ ನುಡಿಯುವ
ದುಂಟು.

ಕುದುರೆ :

ಮಿಡಿ ಮಿಡಿ-ಯಾ ಮಿಡಿ । ಸವತಿ ಮಿಡಿ ।
ಕುದರಿಗ್ಯಾಕು ಕುತನಿ ತಡಿ ।
ದೇವರಿಗ್ಯಾಕು ಬಂಗಾರ ಕಡಿ ।
ಆಣೆ ಪೀಣೆ ಚ್ಯಾಣೆಗ್ಯೊ ।
ಚ್ಯಾಜ್ಜಿ ರೊಟ್ಟಿ ಗಾಣೆಗ್ಯೊ ।
ನಾಮ್ಮ ಕುದರಿ ಓಡಾಳಿ ಬಾಕೊ ॥

ಎಂದು ಕುದುರೆಯ ಪೀಡೆಗಳ ಆಣಿಯನ್ನೇ ಕಳೆಯುವಂತೆ ಕೇಳಲಾಗಿದೆ. ಇನ್ನೊಂದು ಕಡೆಗೆ –

ಹಾಂಡ ಕುದರಿ ಹಾದಕೋತ ಬರತತಿ ।
ಚಿಂಚ ಕುದರಿ ಚೀರಕೋತ ಬರತತಿ ।
ಕಾಗಿ ನೋತಿ ಕಲ್ಲಾಗ ಸಿಕ್ಕತಿ ।
ಗುಬ್ಬಿ ನೋತಿ ಹುಬ್ಬ ಹಾರಸ್ತತಿ ।
ಆಣೆ ಪೀಣೆ ಜಾಣೆಗೋ ॥

ಹೀಗೆನ್ನುವರು.

ಹೋರಿ :

ಹೋರಿ ಹೋರಿ ಹ್ಯಾಂಗಿರಬೇಕು ।
ನೂಲಿನ ಮಗಾಣ ಹಾಕಿರಬೇಕ ।
ಕುತನಿ ಜೂಲಾ ಹೊದಿಸಿರಬೇಕ ।
ಮುನ್ಯಾನ ಮುದಗಿ ಅಳತಿರಬೇಕ ।
ಓಣ್ಯಾನ ಹುಡಗೂರ ನಗತಿರಬೇಕ ।
ನಾಮ್ಮ ಹೋರಿ ಪೀಡಾ ಹೊಳ್ಯಾಚೀಕೊ ॥

ಎತ್ತು :

ಹೊತ್ತು ಮುಣಗಿತೊ ಲೋಲೋ |
ಜಾನ್ಯಾಗ್ಡಿತ್ತಿನ ಬಾಲಾ |
ಬಾಲ ವಗ್ಯಾಲ ಬಂಡಿ |
ಬಂಡಿ ವಗ್ಯಾಲ ನೌಲಾ |
ನೌಲ ಕಟ್ಟ್ಯಾ ಕತ್ತ | ಚಿಗರಿ ಕೋಡಿಗ್ಯಾಕ |
ಚಿಗರಿ ರಾನ್ಯಾಗ ಜಾಣಾ | ಬಸಕ್ಯ ಬಾಣಾ |
ಹೂಗೂ ತೊಟ್ಲ | ಬೆಳ್ಳಿ ಬಾಟ್ಲ |
ಆಡಿ-ಓಡಿ ಚೀಕೊ | ಕೊಬ್ಬರಿ ಬಟ್ಲ್ಯಾ ಜೀಕೊ |
ನಾವು ಎತ್ತಿನ ಹೀಡಾ ಮಾಡ್ಯಾಚಿಕೊ ||

ಆಕು :

ಉಂಡಾ ಪಾಡಾ ಹಾಲಿಕ್ಕಬೇಕ |
ಕಂಟಿ ಕಂಟಿ ಮೇದಿರಬೇಕ |
ಸಾರ್ ಊರ್ ಓಡಿರಬೇಕ |
ವಾಲಿನಲ್ಲಿ ಲಿಟ್ಟಿರಬೇಕ |
ಬೆಳ್ಳಿ ಬಾಂದ ಕೊಡವಿರಬೇಕ |
ಆಯಿ ಬಾಂದ ಬೇದಿರಬೇಕ |
ಮುತ್ಯಾ ಬಾಂದ ಜಡಸಿರಬೇಕ |
ಅವಕ [illegible] ಜ್ಯಾಡಗೊ | ಜ್ಯಾಕ್ಷ ರೊಟ್ಟಿ ಗಾಡಿಗ್ಯೊ |
ನಾವು ಅದರ ಹಿಡಾಳ ಬಾಡ್ಲು ||

ಹೀಗೆ ಪ್ರತಿಯೊಂದು ಪ್ರಾಣಿಯನ್ನು ಕುರಿತು ಆರತಿ ಮಾಡುವಾಗ ಅವರದೆ ವೈಶಿಷ್ಟ್ಯವನ್ನು ಎತ್ತಿ ಹೇಳಲಾಗುತ್ತದೆ. ಹಾಡುವ ಬಗೆ ಪ್ರಾಸಬದ್ಧವಾಗಿ ಅವರ ಗತ್ತಿನೊಂದಿಗೆ ಬರುವುದರಿಂದ ಕೇಳುಗರಿಗೆ [illegible] ಎನಿಸುವುದು. ಕೆಲವೊಮ್ಮೆ

ಪ್ರಾಸಬದ್ಧವಿಲ್ಲದಿದ್ದರೂ ಭಾವಪೂರ್ಣವಾಗಿ ಇದ್ದುದರಿಂದ ಸುಂದರವಾಗಿ ಕಾಣುವುದುಂಟು.

ಪದ್ಯವನ್ನು ಮುಗಿಸುವಲ್ಲಿ ಅನೇಕ ರೀತಿಗಳಿರುವುದನ್ನು ಕಾಣುತ್ತೇವೆ.

೧) ಆಡಿ-ಓಡಿ ಬೇಕೊ । ಕೊಬ್ಬರಿ ಬಾಟ್ಲಾ ಬೇಕೊ ।

೨) ಆಣೆ-ಓಣೆ ಚ್ಯಾಣೆಗೊ । ಚ್ಯಾಜ್ಜ ಕೊಟ್ಟಗಾಣೆಗ್ಯೊ।

೩) ಆಣೆ ಓಣೆ । ಜ್ಞಾಣೆಗೋ ।

೪) ನಾಮ್ಮ......ಓದಾ ಹೊಳ್ಯಾಬೇಕೊ ।

೫) ನಾಮ್ಮ........ಓಡಾಳ ಚ್ಯಾಕೊ ।

ಬಹುತರವಾಗಿ ಈ ರೀತಿ ಭಿನ್ನತೆಯಾಗುವುದಕ್ಕೆ ಪ್ರಾದೇಶಿಕತೆಯು ಕಾರಣವೆನ್ನಬೇಕು. ಇವು ಈ ವರೆಗೆ ಬರಹದಲ್ಲಿ ಮೂಡಿ ಬರದೆ ಇದ್ದುದರಿಂದ ಏಕತೆಯುಂಟಾಗಲು ಸಾಧ್ಯವಾಗಿಲ್ಲ.*

೨) ಹೋಳೀಹುಣ್ಣಿವೆ—

ಗಂಡುಮಕ್ಕಳ ಎರಡನೆಯ ಹಬ್ಬ ಹೋಳೀಹುಣ್ಣಿವೆ. ಇಲ್ಲಿ ಹಾಡುವ ಹಾಡುಗಳು ಶ್ಲೀಲಕ್ಕಿಂತ ಅಶ್ಲೀಲವಾದವುಗಳೇ ಹೆಚ್ಚು. ಇದಕ್ಕೆ ಬಹುತರವಾಗಿ ಹಿಂದಿನ ಪೌರಾಣಿಕ ಕಥೆಯೇ ಕಾರಣವಾಗಿರಬೇಕು. ಗಣಪತಿಯು ಹೊಟ್ಟೆಯೊಡೆದಾಗ ನಕ್ಕ

---

*ಇಲ್ಲಿ ಸಂಗ್ರಹಿಸಿ ಕೊಟ್ಟುದು ಮಾದರಿಗಾಗಿ ಕೆಲವನ್ನು ಮಾತ್ರ. ಹಳ್ಳಿ-ಹಳ್ಳಿಗಳಿಂದ ಸಂಗ್ರಹಿಸಿದರೆ ಇವುಗಳದೆ ಒಂದು ಸಂಗ್ರಹವಾಗುತ್ತದೆ.

ಚಂದ್ರನಿಗೆ. ಚೌತಿಯ ದಿನ ಅವನನ್ನು ಯಾರೂ ನೋಡಬಾರದೆಂದು, ನೋಡಿದವರಿಗೆ ದೋಷ ತಗಲುವುದೆಂದು ಅವನು ಶಾಪಕೊಟ್ಟನು. ಆದ್ದರಿಂದ ಅಂದು ಚಂದ್ರನನ್ನು ಯಾರೂ ನೋಡಬಾರದೆಂದು ಒಂದು ರೂಢಿ ನಡೆದುಕೊಂಡು ಬಂದಿದೆ. ಒಂದು ವೇಳೆ ಅಪ್ಪಿ ತಪ್ಪಿ ನೋಡಿದ್ದಾದರೆ ಯಾರಕಡೆಯಿಂದಲಾದರು ಬಯ್ಸಿಕೊಂಡರೆ, ನೋಡಿದ್ದರ ದೋಷ ತಪ್ಪಿ ಹೋಗುವುದೆಂದು ನಂಬಿಕೆ. ಎಲ್ಲಿ ನಿಷೇಧವಿದೆಯೋ ಅಲ್ಲಿ ಆಗ್ರಹ ಹೆಚ್ಚು. ಹಾಗೆಯೆ ಮಕ್ಕಳು ಚಂದ್ರನನ್ನು ಅಂದು ನೋಡಬಾರದೆಂದು ಹೇಳಿದರೆ ಉದ್ದಾಮಾಗಿ ನೋಡುತ್ತಾರೆ. ಆಮೇಲೆ ಅದರ ಪರಿಹಾರಾರ್ಥವಾಗಿ ಬಯ್ಸಿಕೊಳ್ಳುತ್ತಾರೆ. ಕೆಲವೊಮ್ಮೆ ಪಡುವಲಕಾಯಿಯನ್ನು ತಿಂದು ನಿವಾರಿಸಿಕೊಳ್ಳುತ್ತಾರೆ. ಬಹುತರವಾಗಿ ಪಡುವಲಕಾಯಿಯನ್ನು ಹರಿಯುವಲ್ಲಿ ಬಯ್ಗುಳ ಬಂದೇ ಬರುವವೆನ್ನುವದರಿಂದ ಈ ರೀತಿಯಾಗಿ ಹೇಳಿದರೂ ಹೇಳಿರಬಹುದು. ಇನ್ನು **ಜನರ ಕಡೆಯಿಂದ** ಬಯ್ಗುಳನ್ನು ಪಡೆಯಬೇಕಾದರೆ ಅವರನ್ನು ರೇಗಿಸಬೇಕು. ಅದಕ್ಕಿರುವ ಉಪಾಯವೆಂದರೆ ಅಶ್ಲೀಲ–ಅವಾಚ್ಯ ಶಬ್ದಗಳನ್ನು ಬಳಸುವದು. ಹೀಗಾಗಿ ಇದು ರೂಢಿಯಾಗಿ ಬಂದಿರಬೇಕು. ಮತ್ತು ಒಳ್ಳೆಯದರಕಿಂತ ಕೆಟ್ಟದರ ಕಡೆಗೆ ಮನಸ್ಸು ವಾಲುವದು ಸ್ವಾಭಾವಿಕ. ಆದ್ದರಿಂದ ವಿಶೇಷ ಪ್ರಚಾರವನ್ನು ಪಡೆದು ವ್ಯಾಪ್ತವಾಯಿತೆಂದು ಹೇಳಬಹುದು.

ಫಾಲ್ಗುಣಮಾಸದ ಶುಕ್ಲಪಕ್ಷದ ಬಿದಿಗೆಯ ಚಂದ್ರನನ್ನು ನೋಡುವುದರಿಂದ ಪ್ರಾರಂಭವಾಗುವ **ಹೊಯ್ಕೊಳ್ಳುವಿಕೆಯೂ**

ಕೃಷ್ಣಪಕ್ಷದ ಪಂಚಮಿಯವರೆಗೆ ನಡೆಯುತ್ತದೆ. ಭಾರತದ ತುಂಬ ಈ ಹಬ್ಬದ ಆಚರಣೆಯಾಗುತ್ತಿದ್ದು ಬೇರೆ ಬೇರೆ ಕಡೆಗೆ ಬೇರೆ ಬೇರೆ ರೀತಿಯಲ್ಲಿ ಆಚರಿಸುವುದುಂಟು.

ತಾನು ಮಾಡಿದ ತಪ್ಪನ್ನು ಇನ್ನೊಬ್ಬನೂ ಮಾಡಬೇಕೆಂಬುದು ಪಾಪಾನ್ಯವಾದವನ ಬಯಕೆ. ಬಸವನ ಮೂಗಿನಲ್ಲಿ ಬಟ್ಟಿಡುವ ಕೆಲಸವಿದು. ಅಂತೆಯೇ ಹೊಯ್ಕೊಳ್ಳದವರನ್ನು ಆ ಕೆಲಸಕ್ಕೆ ತೊಡಗಿಸುತ್ತಾರೆ ಏನಾದರೊಂದು ಮಾತನ್ನು ಅಡಿ ಈ ಮಾತು ಅಶ್ಲೀಲ, ಅಸಭ್ಯವಾದುದೇ ಆಗಿರುತ್ತದೆ.

ಕಾಮಣ್ಣಾ ಭೀಮಣ್ಣಾ
ಕಾತ್ರಿ......ಗ್ಗೆ ನೆಕ್ಕಣ್ಣಾ ।

ಎಂದು ಹೊಯ್ಕೊಳ್ಳಲು ತೊಡಗುತ್ತಾರೆ. ಯಾರಾದರು ಹಿಂಜರಿದರೆ ಅವರನ್ನು ಎಲ್ಲರೂ ಕೂಡಿ ಹೀಯಾಳಿಸುತ್ತಾರೆ. ಮತ್ತು 'ಯಾರ ಹೊಯ್ಕೊಳ್ಳುದಿಲ್ಲ ಅವರು ಕಾತ್ರಿ ರುಬ್ಬಿ ನೆಕ್ಕಿದಾಂಗೊ' ಎನ್ನುವರು. ಮತ್ತೆ ಕೈಗೆ ಬಾಯಿಗೆ ಜಗಳ ನಡೆಯುತ್ತದೆ.

ಈ ಹಬ್ಬದಲ್ಲಿ ಜಾತಿ, ಮತ, ದೊಡ್ಡವ-ಸಣ್ಣವ, ಸಿರಿವಂತ-ಬಡವ ಎಂದು ಭೇದಮಾಡದೆ ಎಲ್ಲರನ್ನೂ ತಂಟಿಗೆ ತೆಗೆದು ಕೊಳ್ಳಲಾಗುವದು. ಆ ಗುಂಪಿನಲ್ಲಿ ಆಯಾ ವರ್ಗದವರಿದ್ದರೂ ಉಳಿದವರೊಡನೆ ಪಾಲ್ಗೊಳ್ಳುತ್ತಾನೆ. ಅವುಗಳ ಬಗೆಗೆ ವಿಶೇಷವಾದ ಅರ್ಥವನ್ನು ಕಲ್ಪಿಸಲು ಹೋಗುವುದಿಲ್ಲ. ಇಲ್ಲಿ ಕೆಲವು ಮಾದರಿಗಳನ್ನು ನೋಡೋಣ.

ಆರ ಗೇರ ಆಳ್ಪಿಟ್ಯಾ ।
ಮೂರ ಜೇಠ ತಂಬಿಟ್ಯಾ ।
ಅದರಾಗೆರಡ ಹಾಳ್ಯಾ ।
ತಾಗರೂರ ಮುಳಳ ಹಚ್ಯಾ ॥

ಎಂದು ಬ್ರಾಹ್ಮಣರನ್ನು ಕುರಿತು ಹೋಳೀ ಹಚ್ಚುತ್ತಾರೆ.

ಒಮ್ಮೊಮ್ಮೆ ಇದೇ ಪ್ರಸಂಗವೆಂದು ಅನ್ಯವಹಾರದಲ್ಲಿ ತೊಡಗಿರುವವರನ್ನು ತರಾಟೆಗೆ ತೆಗೆದುಕೊಳ್ಳುವುದುಂಟು.

೧) ಏನ ಚಂದಿ ಜಮುಖಂಡಿ ।
ಮುಂದಕ್ಕಾಣೂದು ಮುದಕಖಂಡಿ ।
ಕಂದಾನ ಗಂಟಿ ಕಾಳಕೊಂಡಿ ।
ಆಕೇ ಮುಂದ ಸತ್ತ ಹೊಂದ್ಯಾಂಡಿ ॥

೨) ಜಮುಖಂಡಿ ಮುದಕಖಂಡಿ ।
ಗಂಡನ ಮುಂಗಳ್ಕ ಇಟ್ಟುಕೊಂಡಿ ।
ಕೊಂಬಾರ ಸಾಲ್ಯಾಗ ಮಾಡಕೊಂಡಿ ।
ನಂಗಾ ಹುಟ್ಟಿತ ಉಪರಾಟಿ ।
ಹೆಂಗ ಬಿನ್ನೈಸ್ಸನ ತಿಪರಾಟಿ ।

ಇಲ್ಲಿ ಬಳಸುವ ಊರುಗಳು ಸುಮ್ಮನೆ ಪ್ರಾಸಕ್ಕಾಗಿಯೋ ಇನ್ನಾವುದಕ್ಕಾಗಿಯೋ ಇರುತ್ತವಲ್ಲದೆ ಅಲ್ಲಿ ಇಂಥವೆ ಕೆಲಸ ನಡೆಯುತ್ತದೆಂದಲ್ಲ.

ಹುಡುಗಿಯರನ್ನೂ ಈ ಹಬ್ಬದಲ್ಲಿ ಹೀಯಾಳಿಸುವುದುಂಟು.

ಎದಿಮ್ಯಾಲಿನು ಬನ ಪ್ರೋರಿ
ಪೇರೂ ಕಾಯಿ ಅಟ್ಟಟ್ಟ ।
ಅನಬಾರದಪ್ಪಾ ಮಗನ
ದೇವರ ಕೊಟ್ಟಟ್ಟ ॥

ಇಲ್ಲಿ ಒಬ್ಬನು ಹುಡುಗಿಯರನ್ನು ಚಿಡಾಯಿಸಿದರೆ ಇನ್ನೊಬ್ಬನು ಸಮಾಧಾನ ಮಾಡಲು ನಟಿಸುತ್ತಾನೆ. ಹೀಗೆಯೇ ಅವರವರಿಗೆ ಅಳವಟ್ಟ ವಿಷಯಗಳನ್ನು ಸೇರಿಸಿ ಪದ್ಯಗಳನ್ನು ಕಟ್ಟಿ, ಹಾಡಿ, ಆಡಿ, ' ಹೊಡೆದು ' ನಲಿಯುವರು.

ಹೆಣ್ಣು ಮಕ್ಕಳ ಹಬ್ಬಗಳು—

ಹೆಣ್ಣುಮಕ್ಕಳು ಹಾಡಿಯಾಡುವ ಹಬ್ಬಗಳೆಂದರೆ ಗುಳ್ಳವ್ವ ಮತ್ತು ನಾಗರಪಂಚಮಿಗಳೆರಡು

೧) ಗುಳ್ಳವ್ವನ ಹಬ್ಬ—

ಗುಳ್ಳವ್ವನ ಹಬ್ಬ ಕರ್ನಾಟಕದಲ್ಲಿ ಮಾತ್ರ ನಡೆಯುವ ವಿಶಿಷ್ಟವಾದ ಹಬ್ಬ. ಹಾಗೆ ನೋಡಿದರೆ ಇಲ್ಲಿಯೂ ಮಣ್ಣು ಪೂಜೆ ನಡೆಯುತ್ತದೆ. ಇದು ಹೆಣ್ಣುಮಕ್ಕಳ ಹಬ್ಬವಾದರೂ ಗಂಡುಮಕ್ಕಳೂ ಇದರಲ್ಲಿ ಪಾಲುಗೊಳ್ಳುತ್ತಾರೆ.

ಈ ಗುಳ್ಳವ್ವನ ಹಬ್ಬ ಬರುವುದು ಆಷಾಢಮಾಸದಲ್ಲಿ. ಉಳಿದ ಹಬ್ಬಗಳಂತೆ ಇದು ಒಂದು ದಿನದಲ್ಲಿ ನಡೆದು ಹೋಗುವುದಿಲ್ಲ. ಇಡೀ ತಿಂಗಳ ವಾರದಲ್ಲಿ ಎರಡು ದಿನಗಳಂತೆ ನಡೆಯುತ್ತದೆ. ಪ್ರತಿ ಮಂಗಳವಾರ ಹುಡುಗಿಯರು ಗುಂಪುಗೂಡಿಕೊಂಡು ಹೊಲಗಳಿಗೆ ಹೋಗಿ ಹದವಾದ ಮಣ್ಣನ್ನು ತೆಗೆದುಕೊಂಡು ಬರುತ್ತಾರೆ. ಈಗಾಗಲೆ ಮಳೆಗಾಲ ಪ್ರಾರಂಭವಾಗಿ

ದಿನಗಳು ಕಳೆದುದರಿಂದ ಮಣ್ಣು ಹದಗೊಂಡಿರುತ್ತದೆ. ಅದನ್ನು ತಂದು ಸಂಜೆ ಗುಳ್ಳವ್ವನನ್ನು ಮಾಡುತ್ತಾರೆ. ಆ ಮಣ್ಣನ್ನು ತರುವಾಗ.

> ಗುಳ್ಳವ್ನ ಹೆಣಮಗಳು ಆಡಲ್ಹೋಗ್ಯಾಳು |
> ಉತ್ರಿತ್ತಿ ಬನಕ ತೊಟ್ಟಿಲ ಕಟ್ಟಿ |
> ಜುಂಯ್ ಜುಂಯ್ ಅಂದಾಳು ||

ಎಂದು ಹಾಡುತ್ತ ಬರುವರು. ಮಾಡಿದ ಗುಳ್ಳವ್ವನಿಗೆ ಗುಲಗಂಜಿಯನ್ನು ಬಣ್ಣದಲ್ಲಿ ಅದ್ದಿದ ಕುಸುಬಿ ಮುಂತಾದ ಧಾನ್ಯಗಳನ್ನು ಮೈತುಂಬಿ ವಿವಿಧಾಕಾರಗಳಲ್ಲಿ ಮೆತ್ತಿ ಸುಂದರ ವಾಗಿಸುತ್ತಾರೆ. ಮಗ್ಗುಲ್ಲಲ್ಲಿಯೆ ಒಂದು ಕೋಣವನ್ನು ಮಾಡಿ ಇಡುತ್ತಾರೆ. ಹೀಗೆ ಪ್ರತಿಮನೆಯಲ್ಲಿಯೂ ನಡೆಯುತ್ತದೆ.

ಕತ್ತಲಾಗುತ್ತಲೆ ಓಣಿಯಲ್ಲಿಯ ಓರಗೆಯ ಹುಡುಗಿಯರು ಕೂಡಿಕೊಳ್ಳುತ್ತಾರೆ. ಕುಂಬಾರರು ಮಣ್ಣಿನಲ್ಲಿ ತಯಾರಿಸಿದ ಆರತಿಗಳನ್ನು ಕೈಯಲ್ಲಿ ತೆಗೆದುಕೊಳ್ಳುತ್ತಾರೆ. ಪ್ರತಿಮನೆಯ ಲ್ಲಿಯ ಗುಳ್ಳವನಿಗೆ ಆರತಿಯನ್ನು ಬೆಳಗುತ್ತಾರೆ. ಈ ಆರತಿ ಯನ್ನು ಬೆಳಗುವುದಕ್ಕೆ ಮೊದಲು ಗುಳ್ಳವ್ವನನ್ನು ಬಾಗಿಲ ತೆರೆ ಯುವಂತೆ ಕೇಳಿಕೊಳ್ಳುತ್ತಾರೆ.

> ಬಂದಾಡಕಿ ಕಪ್ಪಾ | ನಾ ನೋಡಿನ ಕಪ್ಪಾ |
> ಭೀಮಾರತಿ ಹೋಳಿಯು | ಹೊಳಿತಕ ತಿಳಿಯು |
> ಗುಳ್ಳವ್ವನಿನ್ನ ಸ್ಯಾಳಿ ಬಾಕಲಾ ತಗಿಯ ||

ಹೀಗೆಯೆ ತಾನು ಮಾಡಿದ ತಪ್ಪಿಗಾಗಿ ಅಯ್ದು ಅಡಕೆಯ ತಪ್ಪು ಕಾಣಿಕೆಯನ್ನು ಕೊಟ್ಟು ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತಾಳೆ.

ಜೊತೆಗೆ ಗುಳ್ಳವ್ವ ಭೀಮಾರತಿಯಂಥವಳು ವಿಶಾಲ ಮತ್ತು ತಿಳಿ–ಪವಿತ್ರ. ಎಂದು ಅವಳನ್ನು ಕೊಂಡಾಡಿ ಅವಳ ಸೆಳೆಸು ಬಾಗಿಲನ್ನು ತೆರೆಯುವುದಕ್ಕೆ ವಿನಂತಿಸಿಕೊಳ್ಳುತ್ತಾರೆ. ಮತ್ತು ಅವಳನ್ನು ಕೊಂಡಾಡುತ್ತಾರೆ.

ಒಂದ ಮೂಲ್ಯಾಗೊಂದ ಕಸ್ತೂರಿ ।
ಗುಳ್ಳವ್ವನ ಕಾಲೆಲ್ಲ ಬೆಳ್ಳಿ ಕಸ್ತೂರಿ ।
ಕಸ್ತೂರ್ಯಾಗ ಪಚ್ಚಿವ್ಯಾರ ।
ಗುಳ್ಳವ್ವನ ಮುತ್ತಿನಂಥಾ ಮಂಗಳವಾರ ॥

ಹೀಗೆಯೆ ಎಂಟು ಮೂಲೆಗಳಲ್ಲಿ ಬಿಲ್ವಪತ್ರಿಯನ್ನಿಟ್ಟು ಪೂಜಿಸುವದು ಈ ಗುಳ್ಳವ್ವನ ಸ್ತುತಿಯ ಜೊತೆಗೆ ಬಸವನನ್ನೂ ಕೊಂಡಾಡುತ್ತಾರೆ. ಕೆಲವು ಕಡೆಗೆ ಇದನ್ನು ಪ್ರತ್ಯೇಕವಾಗಿಯೆ ಮಾಡುತಿದ್ದರೆ ಕೆಲವೆಡೆ ಗುಳ್ಳವ್ವನ ಜೊತೆಗೆ ಸೇರಿಸುತ್ತಾರೆ. ಬಸವನ ಯಾವ ಪ್ರತಿಮೆಯೂ ಇಲ್ಲಿ ಇರುವದಿಲ್ಲ. ಆದರೂ ಈಗ ಈ ಹಾಡನ್ನು ಏಕೆ ಹಾಡುತ್ತಾರೆಯೊ ತಿಳಿಯುವುದಿಲ್ಲ. ಆದರೂ

ಒಂದು ಸುತ್ತಿನ ದುರಗಾ ಆನೆಯಾಗ ಹೆಸರಿನ ಕಂಚಿನಾಗ ಬಸವಾ।
ಬಸವಕ್ಕ ಬಸವಣ್ಣಗೆ ಎಣ್ಣೆಸ ಪಾದಕ ಶರಣ್ಣಾರೆ ॥೧॥

ಹೀಗೆಯೆ ಒಂದು, ಎರಡು, ಮೂರು, ನಾಲ್ಕು, ಐದು ಮತ್ತು ಆರು ಸುತ್ತಿನ ದುರಗಗಳಲ್ಲಿ ಅನುಕ್ರಮವಾಗಿ ಎಮ್ಮೆ ಎಂಬು, ಮೂಡಿ ಬಂದು, ಪಕ್ಕ, ಆಟವಾಡಿ ಕೊನೆಗೆ ಐಕ್ಯವಾಗುತ್ತಾನೆ. ಎರಡನೆಯ ನಾಲು ಯುಗಾನತ್ಯಾಗಿಯೆ ನಡೆದು ಬರುತ್ತದೆ.

ಹೀಗೆ ಅನೇಕ ಹಾಡುಗಳನ್ನು ಹಾಡಿ ಮುಂದಿನ ಮನೆಗೆ ಹೋಗುತ್ತಾರೆ. ಪ್ರತಿ ಮನೆಯವರೂ ಆರತಿಗೆ ಎಣ್ಣೆಯನ್ನು

ಹಾಕುವುದುಂಟು. ಎಲ್ಲ ಮನೆಗಳನ್ನು ಮುಗಿಸಿ ತಿರುಗಿ ಬಂದ ಮೇಲೆ ಆಕೆಗೆ ನೈವೇದ್ಯಮಾಡುತ್ತಾರೆ. ಮನೆಯಲ್ಲಿದ್ದ ಗಂಡು ಮಕ್ಕಳು ಗುಳ್ಳವ್ವನ ಪಾತ್ರದಲ್ಲಿದ್ದ ಕೋಣವನ್ನು ಕಡಿಯುತ್ತಾರೆ. ಗುಳ್ಳವ್ವನಿಗರ್ಪಿತವಾದ ನೈವೇದ್ಯವನ್ನು ತೆಗೆದುಕೊಳ್ಳುತ್ತಾರೆ. ಹೀಗೆ ಮೊದಲದಿನ ಕಳೆಯುತ್ತದೆ.

ಎರಡನೆಯ ದಿನ ಅಂದರೆ ಬುಧವಾರ ಗುಳ್ಳವ್ವನನ್ನು ತೆಗೆದುಕೊಂಡು ಆಡುವುದಕ್ಕೆ ಹೋಗುವದು. ವಿಸ್ತಾರವಾದ ವನಮಂಜರಿಯಲ್ಲಿಯೋ, ಗುಡ್ಡದ ತಪ್ಪಲು ಪ್ರದೇಶದಲ್ಲಿಯೋ ತೋಟದಲ್ಲಿಯೋ ಹೆಣ್ಣುಮಕ್ಕಳ ಆಟ. ಸಣ್ಣವರು-ದೊಡ್ಡವರು ಎನ್ನದೆ ಎಲ್ಲರದೂ ಇದರಲ್ಲಿ ಪಾಲು. ದೊಡ್ಡವರಿಗೆ ಒಂದು ರೀತಿಯ ವನಭೋಜನವಾದರೆ ಸಣ್ಣವರಿಗೆ ಆಡುವ ಸೌಭಾಗ್ಯ. ಉತ್ತಮೋತ್ತಮ ಪದಾರ್ಥಗಳನ್ನು ಮಾಡಿಕೊಂಡು ಹೋಗಿ ಒಬ್ಬರಿಗೊಬ್ಬರು ಹಂಚಿ ಸುಖವಾಗಿ ಊಟಮಾಡುವ ಆ ದೃಶ್ಯ ನೋಡುವಂತಹದು.*

ಈ ಪ್ರಸಂಗದಲ್ಲಿ ಆಡುವ ಆಟಗಳಲ್ಲಿ ಬಹುಮುಖ್ಯವಾದುದು ಇತ್ತಂಡದವರಾಗಿ ಆಡುವ ಮದುವೆಯ ಆಟ. ಒಂದು ಪಕ್ಷ ಗಂಡಿನವರದಾದರೆ ಇನ್ನೊಂದು ಹೆಣ್ಣಿನವರದು. ಆ ಆಟದಲ್ಲಿ ಹಾಡುವ ಹಾಡಿನಲ್ಲಿ ಹೆಣ್ಣು ಕೇಳುವುದನ್ನು ಮೊದಲು ಮಾಡಿಕೊಂಡು ಆಕೆಯನ್ನು ಗಂಡನ ಮನೆಗೆ ಕಳುಹಿಸುವವರೆಗೆ ನಡೆಯುತ್ತದೆ.

---

*ಜಮಖಂಡಿ ತಾಲೂಕಿನ [illegible]ಯಲ್ಲಿ ಈ 'ಗುಳ್ಳವ್ವನ ಊಟ' ಈಗಲೂ ನಡೆಯುತ್ತದೆ.

ಗುಳ್ಳವ್ವನ ಮೂರ್ತಿಯನ್ನು ಮಧ್ಯದಲ್ಲಿಡುತ್ತಾರೆ. ಬೇವಿನ ತೊಪ್ಪಲನ್ನೊ ಅವರೆಯ ತೊಪ್ಪಲನ್ನೊ ಹಿಡಿದು ಕೊಂಡು ಆ ಕಡೆ ಒಂದಿಷ್ಟು ಈ ಕಡೆ ಒಂದಿಷ್ಟು ಜನರು (ಹುಡು ಗಿಯರು) ಕೂಡಿ ಸರಪಳಿಯಂತೆ ಕೈಗಳನ್ನು ಹಿಡಿದು, ಒಂದು ಗುಂಪನ್ನು ಗಂಡಿನವರದನ್ನಾಗಿಯೂ ಇನ್ನೊಂದು ಗುಂಪನ್ನು ಹೆಣ್ಣಿನವರದನ್ನಾಗಿಯೂ ಕಲ್ಪಿಸಿ, ಹಿಂದಕ್ಕೆ ಅಯ್ದು ಹೆಜ್ಜೆ ಸರಿದು, ಮುಂದಕ್ಕೆ ಅಯ್ದು ಹೆಜ್ಜೆ ಬಂದು, ನಟನೆ ಮಾಡುತ್ತ, ಸಂದರ್ಭಕ್ಕೆ ತಕ್ಕಂತೆ ಒದೆಯುತ್ತ; ಸರಪಳಿಯನ್ನು ಹರಿಗೊ ಡದೆ ಬೇಗಬೇಗನೆ ಹಿಂದೆ-ಮುಂದೆ ಸರಿಯುತ್ತಾರೆ ಈ ಪ್ರಸಂಗ ದಲ್ಲಿ.

ಹೆಣ್ಣಿನವರು–

ಗುಜು ಗುಜು ಮೋಪರು ಯಾತರವರು ?
ಗುಜೇರಿ ಮೋಪರು ಯಾತರವರು ?
ಸಾಮುದಂಡಿಗೆ ಯಾತರವರು ?
ಸಿರಿ ಲೋಕಕೆಲ್ಲ ಯಾತರವರು ?

ಗಂಡಿನವರು–

ಗುಜು ಗುಜು ಮೋಪರು ಹಾರರೂರು.
ಗುಜೇರಿ ಮೋಪರು ಹಾರರೂರು.
ಸಾಮುದಂಡಿಗೆ ಹಾರರೂರು.
ಸಿರಿ ಲೋಕಕೆಲ್ಲ ಹಾರರೂರು.

ಹೆಣ್ಣಿನವರು–

ಗುಜು ಗುಜು ಮೋಪರಿಗ್ಹೆಣ್ಣಿಲ್ಲ.
ಗುಜೇರಿ ಮೋಪರಿಗ್ಹೆಣ್ಣಿಲ್ಲ.
ಕಾಮದಂಡಿಗೆ ಹೆಣ್ಣಿಲ್ಲ.
ಸಿರಿ ಲೋಕಕೆಲ್ಲ ಹೆಣ್ಣಿಲ್ಲ.

ಗಂಡಿನವರು ಬೇರೆ ಬೇರೆ ಜಾತಿಗಳನ್ನು ಹೇಳುತ್ತ ಹೋಗುವರು ಆದರೆ ಹೆಣ್ಣಿನವರು ತಮ್ಮ ಜಾತಿ ಬರುವವರೆಗೆ ಕೊಡುವದಿಲ್ಲವೆಂದು ಹೇಳಿ ತಮ್ಮದು ಬಂದಾಗ ಒಪ್ಪಿಕೊಳ್ಳುವರು.

ಹೆಣ್ಣಿನವರು–

ತಬಲಕ್ ತಾಲಿ ಹೂವಿನ ಮಾಲಿ
ಹೆಣ್ ಕೊಡತೀವತ್ತಿಗೆ ಹೆಣ್ ।

ಗಂಡಿನವರು–

ತಬಲಕ್ ತಾಲಿ ಹೂವಿನ ಮಾಲಿ
ಹೆಣ್ ಕೊಡತ್ತಿಗೆ ಹೆಣ್ ಕೊಡತ್ತಿಗೆ ।

ಹೆಣ್ಣಿನವರು–

ಸುರಸುರ ಬದ್ದಿಗೆ ಹಿರಿಯರ ಗದ್ದಿಗೆ
ಹೆಣ್ಣೊಪ್ಪಿತತ್ತಿಗೆ ಹೆಣ್ಣೊಪ್ಪಿತತ್ತಿಗೆ ।

ಗಂಡಿನವರು–

ಸುರಸುರ ಬದ್ದಿಗೆ ಹಿರಿಯರ ಗದ್ದಿಗೆ
ಗಂಡೊಪ್ಪಿತತ್ತಿಗೆ ಗಂಡೊಪ್ಪಿತತ್ತಿಗೆ ।

ಹೆಣ್ಣಿನವರು—

ತಬಲಕ ತಾಽಲಿ ಹೂವಿನ ಮಾಽಲಿ
೬ ಯ್ನೂರುಪಾಯಿ
ಸೀಽರಿ ಕೊಽಡತ್ತಿಗೆ ಸೀಽರಿ ಕೊಽಡತ್ತಿಗೆ ।*

ಗಂಡಿನವರು—

ತಬಲಕ್ ತಾಽಲಿ ಹೂಽವಿನ ಮೋಽಲಿ
ಕೊಡತಿವೇಽಳತ್ತಿಗೆ ಕೊಡತೀವೇಽಳತ್ತಿಗೆ ।

ಹೀಗೆಯೆ ಹೆಣ್ಣಿನವರು ಏಕ್ಸರಾ, ನತ್ತು, ಬುಗಡಿ, ಬೈರೂ, ಗುಳದಾಳಿ, ಕಾಲುಂಗರ, ಪಿಲ್ಲಿ, ಡಾಬ, ದುಳಿ ಎಲ್ಲವನ್ನು ಬೇಡುವರು. ಅದಕ್ಕೆ ಗಂಡಿನವರು ಒಪ್ಪುವರು. ಆಮೇಲೆ ಗಂಡಿನವರು - ಉಽಗುರ, ಧೋಽತ್ರಜೋಽಡಿ, ರೇಽಶ್ಮೆಅಂಗಿ, ರುಮಾಲು ಇವುಗಳನ್ನು ಬೇಽಡಲು ಹೆಣ್ಣಿನವರು ಒಪ್ಪುವರು. ಹೀಗೆ ಕೊಡುಕೊಳ್ಳುವ ವ್ಯವಹಾರ ಮುಗಿದ ಮೇಲೆ ಗಂಡಿನವರು ಗೆದ್ದ ಹುರುಪಿನಿಂದ,

ಗಂಡಿನವರು—

ಹುಗ್ಗಿ ಮಾಽಡಿ ನಾಽವು
ಗೆದ್ದಿವೇಽಳತ್ತಿಗೆ ಗೆದ್ದಿವೇಽಳತ್ತಿಗೆ ।

---

*ಇನ್ನು ಕೆಲವೊಮ್ಮೆ

ಹೆ.—ಗುಜುಽಗುಜು ಮಾಽಪ್ಪರೇನೊಸ್ವಾ । ಗಽಜೇರಿ ಮಾಽಪ್ಪರೆನೊಸ್ವಾ,
ಸಾಽಮ ದಂಡಿಲೇನೊಸ್ವಾ । ಸಿರಿಲೋಽಕಕೆಲ್ಲಾ ಏನೊಸ್ವಾ ॥

ಗಂ.—ಗುಽಜುಗುಜು ಮಾಽಪರು ರಾಽಳಿ । ಗಽಜೇರಿ ಮಾಽಪರು ರಾಽಳಿ ।
ಸಾಽಮದಂಡಿಲಿ ರಾಽಳಿ । ಸಿರಿ ಲೋಽಕಕೆಲ್ಲಾ ರಾಽಳಿ ॥
ಹೀಗೂ ಅನ್ನುವುದುಂಟು.

ಹೆಣ್ಣಿನವರು–

ಗೆದ್ದವರ ಬಾದ್ದಿನಸ್ಯಾಲ್ಯಾದ್ದಿವೇಳತ್ತಿಗೆ ವಾದ್ದಿವೇಳತ್ತಿಗೆ।

ಹೀಗೆಯೆ ಉಂಡಿ, ಸ್ಯಾಂವ್ಗಿ, ಅನ್ನ, ಅಂಬ್ರಾ ಇವೆಲ್ಲವುಗಳನ್ನು ಹೆಸರಿಸಿ ಮೇಲಿನ ಸಾಲುಗಳನ್ನು ಅನ್ನುತ್ತಾರೆ. ಲಗ್ನ ಮುಗಿದು ಹೆಣ್ಣನ್ನು ಕಳಿಸಿಕೊಡಲು ಗಂಡಿನವರು ಕೇಳುತ್ತಾರೆ. ಅವರು ಒಪ್ಪಿ ಹೆಣ್ಣು ಗಂಡಿನ ಮನೆಗೆ ಹೋಗುತ್ತದೆ.

ಇದೆ ಪ್ರಸಂಗದಲ್ಲಿ ಹೆಣ್ಣಿಗೆ ಬಣ್ಣ ತರುವ ಬಗ್ಗೆಯೂ ವಾದ ವಿವಾದ ನಡೆಯುತ್ತದೆ.

ಗಂ– ಬನ್ನಟ್ಟಿ ಬಣ್ಣಾ ತಂದಿವಲ್ಲತ್ತಿಗೆ

ಹೆ– ಆದನಾಮ್ಹೆಣ್ಣಿಗೊಪ್ಪದಿಲ್ಲತ್ತಿಗೆ।

ಹೀಗೆ ಬೇರೆ–ಬೇರೆ ಊರುಗಳ ಬಣ್ಣಗಳನ್ನು ತಂದಾಗ ಒಪ್ಪದೆ ಇದ್ದವರು ಸೂರ್ಯನ, ಅಥವಾ ಚಂದ್ರನ ಬಣ್ಣವನ್ನು ತಂದಾಗ ಒಪ್ಪಿಗೆಯನ್ನು ಸೂಚಿಸುತ್ತಾರೆ. ಇಲ್ಲಿ ಅವರ ಆದರ್ಶವನ್ನು ಕಾಣಬಹುದಾಗಿದೆ.

ಇನ್ನೊಂದು ಆಟ. ಹುಡುಗಿಯರಿಬ್ಬರು ಎದುರು-ಬದರು ನಿಂತು ತಮ್ಮ ಕೈಗಳನ್ನು ಮೇಲೆ ಮಾಡಿ ಕೂಡಿಸಿ ಹಿಡಿಯುವರು ಮತ್ತೊಂದು ಗುಂಪಿನವರು ಆ ಸವಾರಿಯೊಳಗಿಂದ ಹಾಯು ಹೋಗುವರು. ಆಗ ಅವರಲ್ಲಿಯ ಒಬ್ಬರನ್ನು ಹಿಡಿಯುವರು ಆಗ

೧ನೆಯ ಗುಂಪು– ಅಂಬಲಿ ಗಡಿಗ್ಯಾಗ ಮುಗಚಿ ಬಿದ್ದಾವ
ಶರಪೋಳ್ಯೊ ಶರಪೋಳ್ಯೊ।

೨ ,, ,, ಯಾತರಾಗ ಹೇತತಿ?

೧ ,, ,, ಗೋದ್ಯಾಗ ಹೇತತಿ

೨ನೆಯ ಗುಂಪು—ಗೋದಿ ಗೋದಿ ಕೂಡಿಸಿ ಕೊಡತೀವ
ಬಿಡನಾವ್ಮ ಹೆಣ್ |
೧ ,, ,, ನಾವ್ಯಾಕ ಬಿಡೂನು ಕೈಲಾಸ್ ದೆಣ್ |
೨ ,, ,, ಒಂದ ರೂಪಾಯಿ ಕೊಡತಿವ
ಬಿಡನಾವ್ಮ ಹೆಣ್ |
೧ ,, ,, ಒಂದ ರೂಪಾಯಿ ನಾವ್ಮಲ್ಲಿ ತಾವ್ಮಲ್ಲಿ
ತಮ್ಮಲಕ್ಕ ತಾಲಿ
ಹೆಣ್ಣಿಲ್ಲಾತ್ತಿಗೆ ಹೆಣ್ ||

ಹೀಗೆ ಅಯ್ದು ರೂಪಾಯಿಯವರೆಗೆ ಕೇಳಿಕೊಂಡಮೇಲೆ ಒಪ್ಪಿಗೆಯಾಗಿ ಆ ಸಿಕ್ಕ ಹುಡುಗಿಯಿಂದ ಗಂಡನ ಹೆಸರು ಕೇಳಿಕೊಂಡು ಬಿಡುವರು.

ಇನ್ನೊಮ್ಮೆ ಹೆಣ್ಣುಮಕ್ಕಳು ಗುಂಪುಗೂಡಿಕೊಂಡು ಕೆಲವು ಮೋಜಿನ ಪದಗಳನ್ನು ಅನ್ನುವುದುಂಟು.

ಪುಂಡಿ ಪಾಲ್ಲಿಗ್ಹೋಗೀನೆ ಹೋಗೀನೆ |
ಚ್ಯಾಂಡಿ ಚ್ಯಾಂಡಿ ಚಿವುಟೀನೆ ಚಿವುಟೀನೆ |
ಮಲ್ಲಪ್ಪಗೌಡಾ ಕುತ್ತಿದ್ದ ಕುತ್ತಿದ್ದ |
ಕುಂಡಿ ಮ್ಯಾಲ ಸ್ಯಾಳದಿದ್ದ ಸ್ಯಾಳದಿದ್ದ |
ಅಂವನ ಹೇಣ್ತಿ ಯಾವಾಕೆ ಯಾವಾಕೆ |
ಜೋಡಪಿಲ್ಲಿ ಇಟ್ಟಾಕೆ ಇಟ್ಟಾಕೆ |
ಅವನ ಮದವಿ ಎಂದ ಎಂದ |
ನಾಗರ ಪಂಚಮಿ ಮುಂದ ಮುಂದ ||

ಹೀಗೆ ಅನೇಕ ರೀತಿಯಿಂದ ಹಾಡುತ್ತ ಆಟವಾಡುತ್ತಿದ್ದಂತೆ ಹೊತ್ತು ಕೆಳಕ್ಕಿಳಿಯುತ್ತದೆ. ಆಟವನ್ನು ಮುಗಿಸುತ್ತಾರೆ. ಆ

ಮುಕ್ತಾಯ ಜನಮೀರಿಯ (ಗುಳ್ಳವ್ವನಿಗೆ ಇನ್ನೊಂದು ಹೆಸರು) ಮರಣದಿಂದ. ಕಾರಣಾಂತರದಿಂದ ಗುಳ್ಳವ್ವನಿಗೆ ಕಾಹಿಲೆಯಾಗಿ ಆಕೆ ಸಾಯುತ್ತಾಳೆ. ಲೌಕಿಕವಲ್ಲಿ ಯಾರಾದರೂ ಸತ್ತಾಗ ಸರಿಯಾಗಿ ಅಳಲು ಬಾರದ್ದಕ್ಕೆ ಎಷ್ಟೊ ಹೆಣ್ಣುಮಕ್ಕಳು ಬಯ್ಯಿಕೊಳ್ಳುವ ಪ್ರಸಂಗವನ್ನು ಈಗಲೂ ಹಳ್ಳಿಗಳಲ್ಲಿ ನೋಡುತ್ತೇವೆ. ಹಾಗಾಗಬಾರದೆಂದು ಒಂದು ರೀತಿಯ ಟ್ರೇನಿಂಗ ಇದ್ದಂತೆ ಇರುತ್ತದೆ, ಈ ಸನ್ನಿವೇಶ. ಗುಳ್ಳವ್ವನ ಗಂಡ ಮಲ್ಲೇಶಿ. ಜನಮೀರಿಯ ಮರಣದಿಂದ ಅವನಿಗುಂಟಾದ ದುಃಖವೂ ಇಲ್ಲಿ ಸುಂದರವಾಗಿ ಚಿತ್ರಿತವಾಗಿದೆ.

ಏನ್ ಸಾತ್ತೆ ಜನಮೀರಿ
ನಿನ ಗಾಂಡು ಮಾಲ್ಲೇಶಿ
ಬಳ್ಳೊಳ್ಳಿ ಬಾನದಾಗ
ಉಳ್ಯಾಡಿ ಅಳತಾನ ॥

ಈ ರೀತಿಯಾಗಿ ಎಲ್ಲರೂ ಅತ್ತು ಗುಳ್ಳವ್ವನ ಚಲ್ಲಿ ಕೊಟ್ಟು ಹೋಗುತ್ತಾರೆ ಸಂಸ್ಕಾರದ ರೀತಿ ಇಲ್ಲಿ ಕಂಡುಬರುವುದಿಲ್ಲ.

ಈ ಆಟಗಳಲ್ಲಿ ಹುಡುಗರೂ ಸೇರುತ್ತಾರೆ. ಇವರಿಗೆ ಆಟದ ಮೇಲಾಗಲಿ ಹಾಡಿನ ಮೇಲಾಗಲಿ ವಿಶೇಷ ಚಿತ್ತವಿರುವುದಿಲ್ಲ. ಅವರ ಲಕ್ಷವಿರುವುದು ಹುಡುಗಿಯರು ತಂದ ತಿಂಡಿ ಮೇಲೆ ಒಮ್ಮೊಮ್ಮೆ ಗೇಲಿ ಮಾಡಿ ತಿಂಡಿಯನ್ನು ಕಸಿದುಕೊಳ್ಳುವುದೂ ಉಂಟು. ಇದು ಪರಸ್ಪರರಿಗೆ ಗೊತ್ತಿರುವ ಸಂಗತಿಯೆ ಅದ್ದರಿಂದ ಅವರಿಗೆ ಕೊಡಬೇಕಾದುದನ್ನು ಕೊಟ್ಟು

ಜಿವರ ಕಾಟವನ್ನು ತಪ್ಪಿಸಿಕೊಳ್ಳುವರು.

೨) ಪಂಚಮೀ ಹಬ್ಬ—

ಪಂಚಮಿಯು ಹಬ್ಬವೆಂದರೆ ಹೆಣ್ಣುಮಕ್ಕಳದೆ ಎನ್ನುವಷ್ಟು ಪ್ರತೀತವಾಗಿದೆ. ಇಲ್ಲಿ ವಿಶೇಷವಾಗಿ ನಕ್ಕುನಲಿಯುವವರೆಂದರೆ ಯುವತಿಯರು. ಸಣ್ಣವರಿಗೂ ಆಸ್ಪದವಿದೆಯಾದರೂ ಸಿಂಹ ಪಾಲು ಯುವತಿಯರದು. ಆದ್ದರಿಂದ ಒಂದು ಹಾಡನ್ನು ಮಾತ್ರ ಇಲ್ಲಿ ಕೊಟ್ಟು ಮುಗಿಸುವೆ.

ಜೋಕಾಲಿಯಲ್ಲಿ ಎರಡು ಹಗ್ಗಗಳಿದ್ದು ಒಂದೊಂದರಲ್ಲಿ ಒಬ್ಬೊಬ್ಬರು ಎದುರುಬದುರಾಗಿ ಕುಳಿತುಕೊಳ್ಳುವರು ಒಬ್ಬರು ಕಾಲು ಇಳಿಬಿಟ್ಟು ತೂಗಿಕೊಳ್ಳುವವರಾದರೆ ಇನ್ನೊಬ್ಬರು ತಮ್ಮ ಕಾಲಿನ ಬೆರಳುಗಳಿಂದ ಎದುರಿಗಿದ್ದವರ ಹಗ್ಗವನ್ನು ಹಿಡಿದು ಕೊಳ್ಳುವರು. ಜೋಕಾಲಿಯನ್ನು ತೂಗಿ ಕೊಳ್ಳುತ್ತಲೆ,

ಅಡ್ಡಾ ಮಂಚಾ ಹಾಕುನು ಬಾ।
ಗಿಡ್ಡಾ ತುರುಬಾ ಕಟ್ಟುನು ಬಾ।
ಸಾಯಾಕ ಬಸರ್ । ಹಸರ ಕುಬಸ।
ಹನ್ನೆರಡ ಚಿಟ್ಟಿ । ಕುಸಲದ ಗಂಡ।
ಕಾರಿಲಾಕ ಬಾಂದ।
ನಾಳ್ಳಿ ನಾಳ್ಲೆನ್ನಿ । ನಾಲಿ ತಾಂದ।
ಬರ್ತನ ಬರ್ತನ ಅನ್ನಿ । ಬಂಡಿ ತಾಂದ।
ಅದೆಂತ ಬಂಡಿ।
ತೇ ಬಂಡೆ । ತೇ ಬಂಡೆ।
ಅದೇಂತ ತೇರ । ನಿಂಬಿ ತೇರ।
ಅದೆಂತ ನಿಂಬಿ।
ಗಜನಿಂಬೆ । ಗಜನಿಂಬೆ।

ಅದೆಂತ ಗಜಾ | ಆನಿ ಬುಜಾ |
ಅದೆಂತ ಆನಿ |
ಮದ್ದಾನೆ | ಮದ್ದಾನೆ |
ಅದೆಂತ ಮದ್ದ | ಬಾಂವಿ ಮದ್ದ |
ಅದೆಂತ ಬಾಂವಿ ಸೇದೂ ಬಾಂವಿ |
ಅದೇಂತ ಸೇದ | ತಂಬಾಕ ಸೇದ ||

ಹೀಗೆಯೆ ಇನ್ನೂ ಅನೇಕ ಪದಗಳನ್ನು ಹಾಡುವುದುಂಟು. ತವರು ಮನೆಗೆ ಬರಬೇಕೆಂಬ ಹಂಬಲದಿಂದ ಈ ಹಬ್ಬದಲ್ಲಿ ಹಾಡುವ ಹಾಡುಗಳು ಸಾಕಷ್ಟಿದ್ದರೂ ಇಲ್ಲಿ ಅಪ್ರಸ್ತುತವಾಗುವುದರಿಂದ ಹೇಳ ಕಾರಣವಿಲ್ಲ.

ಮಕ್ಕಳನ್ನು ಆಡಿಸುವುದು

ಮಕ್ಕಳನ್ನಾಡಿಸುವ ಈ ಪದಗಳು ಲಾಲಿಯ ಪದಗಳೆಂದೂ, ಕೆಲವೊಮ್ಮೆ ಜೋಗುಳಪದಗಳೆಂದೂ ಕರೆಯಿಸಿಕೊಳ್ಳುತ್ತವೆ. ಲಾಲಿಯ ಪದಗಳು ಈ ಪ್ರದೇಶದಲ್ಲಿ ವಿಶೇಷವಾಗಿ ಇಲ್ಲದ್ದರಿಂದ ಅವುಗಳನ್ನು ಇಲ್ಲಿ ಎತ್ತಿಕೊಂಡಿಲ್ಲ. ಮತ್ತು ಮಕ್ಕಳನ್ನು ಕುರಿತು ತ್ರಿಪದಿಗಳು ಈಗಾಗಲೆ ಅನೇಕ ಗ್ರಂಥಗಳಲ್ಲಿ ಪ್ರಕಟವಾಗಿರುವದರಿಂದ ಅವುಗಳನ್ನೂ ಇಲ್ಲಿ ಸೇರಿಸಿಲ್ಲ. ಇದಕ್ಕೆ ವ್ಯತಿರಿಕ್ತವಾಗಿರುವ ಹಾಡುಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ಮಕ್ಕಳು ಅಳುತ್ತಿರುವಾಗ ತೊಡೆಯ ಮೇಲೆ ಕೂಡ್ರಿಸಿಕೊಂಡು ಹಿಂದೆ-ಮುಂದೆ ಹೊಯ್ದಾಡಿಸಿ ಆಡಿಸುವುದುಂಟು. ಆದರ ಜೊತೆಗೆ

ಅಳೊಳೊ ಆಯವ್ವ । ಬಳೋಲ ಕಾಯವ್ವ ।

ಎಂದು ನಾಲಿಗೆಯನ್ನು ಸುತ್ತಿಸಿ ಧ್ವನಿ ತೆಗೆದು ಹಾಡಿ ಮಗುವನ್ನು ರಮಿಸಲಾಗುವದು. ಒಮ್ಮೊಮ್ಮೆ ಹೀಗೆ ಹೊಯ್ದಾಡಿಸುವಾಗ,

ಆನಿ ಬಂತ ಆನಿ । ಯಾವೂರ ಆನಿ ।
ಇಜಾಪುರ ಆನಿ । ಇಲ್ಲಿಗ್ಯಾಕ ಬತ್ತ ।
ಹಾದಿ ತೆಪ್ಪಿ ಬತ್ತ ।

ಹಾದಿಗೊಂದ ದುಡ್ಡ | ಬೀದಿಗೊಂದ ದುಡ್ಡ |
ಆದ ದುಡ್ಡ ಕೊಟ್ಟ | ಸೇರ ಕೊಬರಿ ತಂದ |
ಲಟ ಲಟ ಮುರದ | ಚಿಗರಿ ಕೋಡಿಗಿ ಹಾಕಿ |
ಉಳದಿದ್ದೆಲ್ಲಾ ನಮ್ಮ ತಮ್ಮನ ಬಾಯಾಗ||

ಎಂದು ಹೇಳುವುದುಂಟು. ಇದನ್ನು ಈ ವಿಧಾನವಲ್ಲದೆ ಅಂಗಾತ ಮಲಗಿ ಪಾದಗಳ ಮೇಲೆ ಮಗುವನ್ನು ಕೂಡ್ರಿಸಿ ಎತ್ತಿ ಇಳಿಸುವುದು ಉಂಟು. ಆದರೆ ಈ ಹಾಡನ್ನು ಹೇಳುವಲ್ಲಿ ಮಗುವಿಗೆ ಆನೆಯ ಹೆದರಿಕೆಯನ್ನು ಹಾಕುವರೆಂದು ಕೆಲವರು ಅಭಿಪ್ರಾಯ ಪಡುವರಾದರೂ ಅಂತಹ ಹೆದರಿಕೆಯ ಪ್ರಸಂಗವೇನೂ ಈ ಭಾಗದಲ್ಲಿ ಕಂಡು ಬರುವುದಿಲ್ಲ.

ಮಗು ತಪ್ಪೆಜ್ಜೆಯಿಟ್ಟು ನಡೆಯಲಿಕ್ಕೆ ತೊಡಗುತ್ತಿರುವಾಗ ತಾಯಿ ಆ ಮಗುವಿನ ಕೈ ಹಿಡಿದು,

ದಟ್ಟಿ ದಟ್ಟಿ ದೊಡ್ಡ ಸಾಲಿ ದೊಡ್ಡ ಸಾಲಿ |
ತೌರಮನಿ ನುಡಸಾಲಿ ಸಡಸಾಲಿ||

ಎಂದು ಹೇಳುತ್ತ ಒಂದೊಂದೆ ಹೆಜ್ಜೆಯನ್ನಿಡುವಂತೆ ಮಾಡುವಳು. ಇಲ್ಲಿ ತೌರಮನೆಯ ಬಗೆಗಿರುವ ಆವಳ ಅಭಿಮಾನವನ್ನು ಕಾಣಬಹುದು. ತನ್ನ ತವರು ಮನೆಯ ಪಡಸಾಲೆಯು ಅವಳ ದೃಷ್ಟಿಯಲ್ಲಿ ದೊಡ್ಡ ಸಾಲೆಯಾಗಿ ಪರಿವರ್ತನಗೊಂಡಿದೆ

ಬೆಳುದಿಂಗಳಿನ ರಾತ್ರಿಯಲ್ಲಿ ಮಗುವನ್ನೆತ್ತಿಕೊಂಡು ಹೊರಗೆ ಆಹ್ಲಾದಕರವಾದ ಬೆಳುದಿಂಗಳನ್ನು ಸೂಸುವ ಚಂದ್ರ

ದೃಷ್ಟಿಪಥದಲ್ಲಿ ಬಾರದಿರುವನೆ? ಅವನನ್ನು ಮಗುವಿಗೆ ತೋರಿಸುತ್ತ,

ಚಂದ್ರಾಮ ಚಂದ್ರಾಮ ಚಾರಿಕಾಯಿ |
ಬಟ್ಟಲ ತುಂಬ ಬಾರಿಕಾಯಿ ॥

ಎಂದು ಮಗುವಿನ ಕೈಯಿಂದ ಚಪ್ಪಾಳೆಯನ್ನು ತಟ್ಟಿಸುತ್ತ, ಹಾಡಿಸುವುದುಂಟು. ಅಂತಹ ಉಲ್ಲಸಿತವಾದ ವಾತಾವರಣದಲ್ಲಿ ಮಗು ನಕ್ಕು ನಲಿಯುತ್ತದೆ. ಅದು ಚಂದ್ರನಂತೆಯೇ ಪ್ರಫುಲ್ಲ ವದನ ಉಳ್ಳದ್ದಾಗಿ ಕಾಣುವುದರಲ್ಲಿ ಸಂದೇಹವೇನಿದೆ !

ಮಕ್ಕಳಿಗೆ ಕಥೆ ಕೇಳುವ ಉತ್ಸುಕತೆ ಇದ್ದೇ ಇರುತ್ತದೆ. ಸಾಯಂಕಾಲವಾಗುತ್ತಲೆ ಮುದಕನಿಗೊ ಮುದುಕಿಗೊ ಕಥೆ ಹೇಳುವಂತೆ ಕಾಟಲೆ ಕೊಡುತ್ತವೆ. ಅವರು ತಮ್ಮಲ್ಲಿರುವ ರಾಜ, ಮಹಾರಾಜರ, ಕಾಗಿ ಗುಬ್ಬಿಯ ಕಥೆಗಳನ್ನು ಹೇಳಿದರೂ ಇವರ ಕಥೆ ಕೇಳಬೇಕೆಂಬ ದಾಹ ಮುಗಿದಿರುವುದಿಲ್ಲ. ಹೇಳುಗರಿಗೆ ಬೇಸರ. ಆಗ ಸುಮ್ಮನೆ ಮುಂದುವರಿಸಿಕೊಂಡು ಹೋಗುವುದಕ್ಕಾಗಿ.

ಕಾತಿ ಕಾತಿ ಕಾರಣಾ | ಮುದಕಿ ಹೂರಣಾ |
ತಿಂದ್ಯೊ ಚಲ್ಲಿದ್ಯೊ ?
ಚಲ್ಲಿನಿ |
ಎಲ್ಲಿ ಚಲ್ಲಿದಿ ?
ತಿಪ್ಪ್ಯಾಗ ಚಲ್ಲಿನಿ |
ತಿಪ್ಪೇನ ಕೊಟ್ಟಿತು ?

ಖಾತಾ ಕೊಟ್ಟಿತು |
ಖಾತಾ ಏನಮಾಡಿದಿ ?
ಹೊಲಕ್ಕ ಹಾಕಿನಿ |
ಹೊಲ ಏನ ಕೊಟ್ಟಿತು ?
ಸೂಡ ಮೇವ ಕೊಟ್ಟಿತು |
ಮೇವ ಏನ ಮಾಡಿದಿ ?
ಆಕಳಿಗೆ ಹಾಕಿನಿ |
ಆಕಳ ಏನ ಕೊಟ್ಟಿತು ?
ಒಂದ ಗಿಂಡಿ ಹಾಲ ಕೊಟ್ಟಿತು |
ಹಾಲ ಏನ ಮಾಡಿದಿ ?
ದೇವರಿಗೆ ಕೊಟ್ಟನಿ
ದೇವರ ಏನ ಕೊಟ್ಟಾ ?
ಗಂಟಿ ಕೊಟ್ಟಾ |
ಗಂಟಿ ಏನ ಮಾಡಿದಿ ?
ಆಯಿ ಕಯ್ಯಾಗ ಕೊಟ್ಟೆ |
ಆಯಿ ಏನ ಕೊಟ್ಟು ?
ಬೆಣ್ಣೆ-ರೊಟ್ಟಿ ಕೊಟ್ಟು |
ಬೆಣ್ಣೆ-ರೊಟ್ಟಿ ಏನ ಮಾಡ್ದಿ ?
ಕುಂಬಿ ಮ್ಯಾಲ ಕುತ್ತಿನಿ ಕಾಗಿ ಕಸಕೊಂಡ ಹೋತ|

ಇಷ್ಟೊತ್ತಿಗೆ ಮಗುವಿಗೆ ಬೇಜಾರವಾಗಿರುತ್ತದೆ. ನಿದ್ರೆಯೂ ಬರಲು ತೊಡಗಿರುತ್ತದೆ. ಕಥೆ ಸಾಕೆಂದು ಮಲಗಿಕೊಳ್ಳುತ್ತದೆ.

ಕೊನೆಯ ಮಾತು

ಮಗು ಆಡುವಾಗ ಹಾಡುತ್ತದೆ; ಕಥೆ ಹೇಳುತ್ತದೆ. ಅಲ್ಲಿ ತನ್ನದೇ ಆದ ಕಲ್ಪನೆ ಅದಕ್ಕಿರುತ್ತದೆ. ಕಥೆ ಹೇಳುವ ಗದ್ಯವೂ ಸಾಹಿತ್ಯವೇ. ಆದರೆ ಇಲ್ಲಿ ಈ ಭಾಗವನ್ನು ತೆಗೆದುಕೊಳ್ಳದೆ ಕೇವಲ ಪದ್ಯವನ್ನು ಮಾತ್ರ ಎತ್ತಿಕೊಂಡಿದ್ದೇನೆ. ಇದು ಕಿರು ಹೊತ್ತಿಗೆಯಾಗಲಿರುವದರಿಂದ ಇಷ್ಟೇ ಸಾಕಾಯಿತು.

ದಿನಮಾನ ಬದಲಾಗುತ್ತ ನಡೆದಿವೆ ಹಳ್ಳಿಗಳಿಗೂ ಪಟ್ಟಣಗಳ ಗಾಳಿ ತಾಗತೊಡಗಿದೆ. ಇದರಿಂದಾಗಿ ಇರುವಿಕೆಯಲ್ಲಿ ಬದಲಾವಣೆಯಾಗುವುದು ಸಹಜ. ಭಜನಿಯ ಪದಗಳಿಗೂ ಸಿನೇಮಾ 'ಚಾಲ' ಕೇಳಿಬರುತ್ತದೆ. ಅಂದಮೇಲೆ ಮಕ್ಕಳ ಹಾಡಿನಲ್ಲಿ ಅದು ಬರುವುಕ್ಕೆ ಅಸಾಧ್ಯತೆಯೇನಿದೆ! ಆದರೂ ಇನ್ನೂ ಬಂದಂತಿಲ್ಲ. ಆದರೆ ಹಳ್ಳಿಯಲ್ಲಿಯ ಮಕ್ಕಳ ಆಟಗಳು ಮಾಯವಾಗತೊಡಗಿವೆ. ಆಟಗಳ ಜೊತೆಗೆ ಸಾಹಿತ್ಯವೂ ಮಾಯವಾಗುವದರಲ್ಲಿ ಸಂದೇಹವಿಲ್ಲ. ಆಟ, ಹಾಡು ಗೊತ್ತಿರುವವರು ಜೀವಿಸಿರುವದರಲ್ಲಿಯೇ ಅವುಗಳನ್ನು ಚಿತ್ರಗಳಲ್ಲಿ ಅಳವಡಿಸಿಕೊಂಡು, ಧ್ವನಿಮುದ್ರಿಕೆಗಳಲ್ಲಿ ಮುದ್ರಿಸಿಕೊಂಡು, ಕಾಯ್ದುಕೊಳ್ಳುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ. ಅವು ಕಳೆದ ಮೇಲೆ ಹುಡುಕಾಡುವದರಿಂದ ಪ್ರಯೋಜನವೇನು? ಸರ್ಕಾರ, ವಿಶ್ವವಿದ್ಯಾಲಯಗಳು ಈ ಕಾರ್ಯವನ್ನು ಕೈಗೆತ್ತಿಕೊಂಡರೆ ಸುಲಭಸಾಧ್ಯ.

——

ಉಪನ್ಯಾಸ ಗ್ರಂಥಮಾಲೆಯ

ಇತ್ತೀಚಿನ ಪ್ರಕಟನೆಗಳು

೧ ಬಸವಣ್ಣನವರ ಧ್ಯೇಯಾದರ್ಶಗಳಿಗೆ ಸಮಕಾಲೀನರ ಕಾಣಿಕೆ —ಸಂಗಮನಾಥ ಹಂಡಿ

೨ ಹರಿಶ್ಚಂದ್ರ ಕಾವ್ಯದಲ್ಲಿಯ ರಸಸ್ಥಾನಗಳು— —ಸಿ. ಎಲ್. ಹೆರಕಲ್ಲ

೩ ಕಾರವಾರ ಜಿಲ್ಲೆಯ ಶಾಸನಗಳು—ಆರ್ ಎನ್. ಗುರವ

೪ ಕನ್ನಡದಲ್ಲಿ ಸಾಂಗತ್ಯ ಸಾಹಿತ್ಯ —ವೀರಣ್ಣ ರಾಜೂರ

೫ ಮಾನಸಿಕ ರೋಗಗಳು —ಎಂ. ಬಿ. ರೇಣುಕಾರ

೬ ಕನ್ನಡದಲ್ಲಿ ಕಾದಂಬರಿ ಸಾಹಿತ್ಯ— ದು. ನಿಂ. ಬೆಳಗಲಿ

೭ ಗರತಿಯರ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ —ದೇವೇಂದ್ರಕುಮಾರ ಹಕಾರಿ

೮ ಮಾನವ ಮತ್ತು ಶಾಕಾಹಾರ— —ಎ. ಎಸ್. ಧರಣೇಂದ್ರಯ್ಯ

೯ ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ —ಎನ್. ಎ. ಪಾಟೀಲ

೧೦ ಜನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ— —ಲೀಲಾವತಿ ತೋರಣಗಟ್ಟಿ

ಪ್ರಸಾರಾಂಗ ವಿಸ್ತರಣ ಹಾಗು ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ—೫೮೦೦೦೩